ಅಪರಂಜಿ

ತಿಳಿನಗೆಯ ಕಾರಂಜಿ



ಜುಲೈ - 2010





ಬಿಡಿ ಪ್ರತಿ: ರೂ. 10.00


ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:

ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್



ಸಂಪುಟ 27
ಸಂಚಿಕೆ - 10
ಜುಲೈ - 2010


ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇತನ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: brmurthy@dataone.in

ಅಪರಂಜಿ ಕಿಡಿ

● ಪ್ರಕಾಶ್



19 ಸಾವಿರದ ಗಡಿ ತಲುಪಿದ ಚಿನ್ನ - ಪತ್ರಿಕೆ

● ಅಪರಂಜಿ ನಸುನಕ್ಕಳಂತೆ !!

★★★

'ರಾಜ್ಯದಲ್ಲಿ 12,353 ಕೋಟಿ ರೂಪಾಯಿ ಬಂಡವಾಳ ಹೂಡಿಕೆ ನಿರೀಕ್ಷೆ' - ಸುದ್ದಿ

● ಅದು 'ಭಂಡ-ವಾಳ' ಆಗದಿರಲಿ !!

★★★

ರಾಜಕೀಯಕ್ಕೆ ಬರಲು ಯುವಕರಿಗೆ ಕರೆ - ಸುದ್ದಿ

● ಏಕೆ ?! ಪಾಪ ?

★★★

ಮಾಡದ ಕೆಲಸಕ್ಕೆ ಬಿಲ್; ಎಂಜಿನಿಯರ್ ಅಮಾನತು - ಪತ್ರಿಕೆ

● ನಿಷ್ಕಾಮ ಕರ್ಮ ಅಂದರೆ ಇದೇ !!

★★★

ಹತ್ತು ಐ.ಎ.ಎಸ್. ಅಧಿಕಾರಿಗಳ ವರ್ಗಾವಣೆ - ಪತ್ರಿಕೆ

● ಅವರೆಲ್ಲ I Am Sorry ಅಂದರಂತೆ !

★★★

ಕಬ್ಬಿಣದ ಕಂಬಿ ಕಳವು; ಆರು ಜನರ ಸೆರೆ - ಸುದ್ದಿ

● ಈಗ ಅವರು ಅವನ್ನೇ ಎಣಿಸುತ್ತಿದ್ದಾರಂತೆ !!

★★★

"ಮದ್ಯ ವ್ಯಸನಿಗಳ ಹೆಚ್ಚಳ ; ಕಳವಳ"
"ರಾತ್ರಿ ಮದ್ಯ ಸರಬರಾಜು ಅವಧಿ ಹೆಚ್ಚಳ"


● ಒಂದೇ ದಿನದ ಪತ್ರಿಕೆಯಲ್ಲಿ !!

★★★

“ನಮ್ಮ ನಿಮ್ಮಲ್ಲಿ”

ಕಳೆದ ತಿಂಗಳು, ನಮ್ಮ ಅಪರಂಜಿ ಬಳಗದ ಹಿರಿಯ ಲೇಖಕಿ ಶ್ರೀಮತಿ ವಿಜಯಾ ಸಚ್ಚಿದಾನಂದ್ ಅವರು ನನಗೆ ಫೋನ್ ಮಾಡಿ 'ನಂಬಿದ್ರೆ ನಂಬಿ, ಬಿಟ್ರೆ ಬಿಡಿ' ಎಂಬ ಶೀರ್ಷಿಕೆಯ ಅವರ ನಗೆ ಬರಹಗಳ ಸಂಕಲನದ ಬಿಡುಗಡೆಗೆ ಬರಬೇಕೆಂದು ಬಹು ವಿಶ್ವಾಸದಿಂದ ಕರೆದರು. ನಾನೂ ಬರುತ್ತೇನೆಂದು ಹೇಳಿದೆ. ಅಂದಿನಿಂದ ಒಂದು ವಾರದ ನಂತರ ಬಂದ ಶನಿವಾರದಂದು ಸಮಾರಂಭ ಇದ್ದದ್ದು. ಶುಕ್ರವಾರದಂದು ಪುನಃ ಅವರಿಂದ ಕರೆ. 'ನಾಳೆ ಬರ್ತಾ ಇದೀರಲ್ಲಾ, ನೀವೇ ಪುಸ್ತಕ ಬಿಡುಗಡೆ ಮಾಡೋದು ಅಂತ ಗೊತ್ತು ತಾನೇ' ಅಂತ ನೆನಪಿಸಿದರು. ಮೊದಲು ಹೇಳಿದಾಗ ನಾನು ಪುಸ್ತಕ ಬಿಡುಗಡೆ ಮಾಡಬೇಕಾಗುತ್ತೆ ಅನ್ನೋ ಅಂಶ ರಿಜಿಸ್ಟರ್ ಆಗಿರಲಿಲ್ಲ. ಈಗ ಅವಸರದಲ್ಲಿ ಒಂದು ಬಿಡುಗಡೆ ಭಾಷಣವನ್ನೂ ಸಿದ್ಧಪಡಿಸಿಕೊಳ್ಳಬೇಕಲ್ಲಪ್ಪಾ ಅಂತ ಹಲುಬುತ್ತಲೇ ಕಾಲಕಳೆದೆ. ಮಾರನೆಯ ದಿನ ಜೆ.ಪಿ.ನಗರದಲ್ಲಿದ್ದ ಅವರ ತಂಗಿಯ ಮನೆಗೆ (ಅದೇ ಅಂದಿನ ಸಮಾರಂಭದ ವೆನ್ಯೂ) ಹೊರಟೆ. ರಾಘವೇಂದ್ರ ಮಠದ ಹತ್ತಿರದ ಟ್ರಾಫಿಕ್ ಲೈಟಿನ ಬಳಿ ಕಾರ್ ನಿಲ್ಲಿಸಿದಾಗ, ಮನೆಯ ವಿಳಾಸ ನೋಡೋಣವೆಂದು ಆಹ್ವಾನ ಪತ್ರಿಕೆಯನ್ನು ತೆಗೆಯಲು ಸೀಟಿನ ಪಕ್ಕ ಹುಡುಕಿದೆ. ಅಲ್ಲಿ ಅದು ಇರಲಿಲ್ಲ. ಮನೆಯಲ್ಲೇ ಮರೆತು ಬಂದಿದ್ದೆ. ಅದರಲ್ಲೇ ವಿಜಯಾ ಅವರ ಮೊಬೈಲ್ ನಂಬರ್ ಸಹಾ ಇದ್ದದ್ದು. ಜೀವನದಲ್ಲಿ ಪ್ಯಾನಿಕ್ ಕ್ಷಣಗಳು ಹೇಗೆ ಎಲ್ಲಿಂದ ಬರುತ್ತವೆಂದು ಯಾರು ತಾನೇ ಬಲ್ಲರು? ಈಗ ನಾನು ಮನೆಯ ಸನಿಹದಲ್ಲೆಲ್ಲೋ ಇದ್ದರೂ ಸಹಾ, ಅದನ್ನು ಸೇರುವ ಬಗೆ ತೋಚಲಿಲ್ಲ. ಅಡ್ರೆಸ್ಸೂ ಇಲ್ಲ, ಫೋನ್ ನಂಬರೂ ಇಲ್ಲ. 'ಕಾಮನ್ ಫ್ರೆಂಡ್ಸ್, ಕಾಮನ್ ಫ್ರೆಂಡ್ಸ್' ಅಂತ ಮನಸ್ಸು ಒಂದೇ ಸಮನೆ ಜಪಿಸತೊಡಗಿತು. ಸಿ.ಆರ್.ಸತ್ಯ? ಆದರೆ ಅವನ ಫೋನ್ ನಂಬರ್ ಸಹಾ ಇಲ್ಲವಲ್ಲಾ.... ಇನ್ಯಾರು? ಇಂತಹ ಪರಿಸ್ಥಿತಿ ಒದಗಿ ಬಂದಾಗ ನನ್ನ ಮಗಳು ನನಗೆ ಒಂದು ಪರಿಹಾರ ಸೂಚಿಸಿದ್ದಾಳೆ. "What is the worst that can happen ಅಂತ ಯೋಚಿಸು, ಎಲ್ಲ ಸರಿಹೋಗುತ್ತೆ" ಅಂತ ಅವಳು ಹೇಳಿದ್ದಳು. Worst ಏನು, ಸಮಾರಂಭ ಮಿಸ್ ಆಗುತ್ತೆ. ವಿಜಯಾ ಅವರು ತುಂಬಾ ಹೊತ್ತು ಕಾದು, ಸುಸ್ತಾಗಿ.... 'ಬರುಕ್ಕೆ ಆಗದೇ ಇದ್ರೆ ಫೋನ್ ಮಾಡಿ ತಿಳಿಸೋ ಅಷ್ಟು ಸೌಜನ್ಯ ಬೇಡವೇ ಆ ಮನುಷ್ಯನಿಗೆ' ಅಂತ ಅಂದ್ಕೋತಾರೆ.... ಮುಂದೆ ಯೋಚಿಸಲು ಆಗಲಿಲ್ಲ. ಎಲ್ಲ ಸರಿಹೋಗಲಿಲ್ಲ! ಹಠಾತ್ತನೆ ನನ್ನ ಚಿದಾಕಾಶದಲ್ಲಿ ಮಿಂಚೊಂದು ಹೊಳೆಯಿತು. ವೈದ್ಯ! ಅವರನ್ನೂ ಸಮಾರಂಭಕ್ಕೆ ಕರೆದಿದ್ದರು. 'ಮನೆಗೆ ನೆಂಟರು ಬಂದಿದ್ದಾರೆ ಹಾಗಾಗಿ ಬರುಕ್ಕಾಗುಲ್ಲ, ವಿಜಯಾ ಅವರಿಗೆ ತಿಳಿಸಿಬಿಡು' ಅಂತ ಹಿಂದಿನ ರಾತ್ರಿ ವೈದ್ಯ ಫೋನ್ ಮಾಡಿದ್ದು ನೆನಪಾಯಿತು. ಕಾರನ್ನು ಬದಿಗೆ ನಿಲ್ಲಿಸಿ, ಆ ಆಪದ್ಬಾಂಧವನಿಗೆ ಫೋನ್ ಮಾಡಿದೆ. ಮೂರು ಬಾರಿ ರಿಂಗ್ ಆದರೂ ಯಾರೂ ಫೋನ್ ತೆಗೆಯಲಿಲ್ಲ. ಸುನಾಮಿ ಅಲೆಯಂತೆ

ಪ್ಯಾನಿಕ್ ಅಲೆ ಮನವನ್ನು ಮತ್ತೆ ಮುಳುಗಿಸಲು ನೋಡಿತು. ಕೊನೆಗೆ, ಮುಕ್ತಿ, ಸಾಕ್ಷಾತ್ಕಾರ ಎಲ್ಲವೂ ಒಟ್ಟಿಗೆ ಬಂದ ಅನುಭವವಾಯಿತು. ಆ ಬದಿಯಿಂದ ರಿಸೀವರ್ ಎತ್ತಿ ವೈದ್ಯ 'ಹಲೋ' ಎಂದಿದ್ದರು.



ಹನ್ನೊಂದಕ್ಕೆ ಇದ್ದ ಸಮಾರಂಭಕ್ಕೆ ಹತ್ತೂ ಐವತ್ತೈದಕ್ಕೆ ತಲುಪಿದ್ದೆ. (ಸಾಮಾನ್ಯವಾಗಿ ನಾನು ಹತ್ತೂವರೆಗೇ ಅಲ್ಲಿರುವಂತಹ ಮನುಷ್ಯ!) ಇನ್ನೂ ಹಲವರು ಅತಿಥಿಗಳು ಬರೋದಿದೆ ಸ್ವಲ್ಪ ಆರಾಮ ಮಾಡಿ ಅಂತ ವಿಜಯಾ ಅವರು ಆತ್ಮೀಯತೆಯಿಂದ ಸ್ವಾಗತಿಸಿದರು. ಮನೆ ಮಟ್ಟಿಗೆ ಮಾಡಿಕೊಂಡಿದ್ದ ಪುಟ್ಟ ಸಮಾರಂಭ ಅದು. ನನ್ನನ್ನು ಸಭೆಗೆ ಪರಿಚಯಿಸಿದ ಸಹೃದಯರು 'ಈಗ ಶಿವಕುಮಾರ್ ಅವರು ಒಂದು ನಗೆ ಭಾಷಣ ಮಾಡಿ ನಮ್ಮನ್ನೆಲ್ಲಾ ರಂಜಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ' ಅಂತ ಹೇಳಿ ಕುಳಿತುಕೊಂಡರು. ಹದಿನೈದು ಹಾಸ್ಯೋತ್ಸವಗಳನ್ನು ಬ್ರೇಕ್ ಇಲ್ಲದೇ ಅವ್ಯಾಹತವಾಗಿ ಅನುಭವಿಸಿರುವ ನನಗೆ ನಗೆ ಭಾಷಣ ಅಂದರೆ ಮೈಯ್ಯೆಲ್ಲಾ ಏನಾಗುತ್ತೆ ಅಂತ ಯಾರಾದರೂ ಊಹಿಸಬಹುದು. ನಾನು ಹಾಸ್ಯ ಮತ್ತು ಅಧ್ಯಾತ್ಮ ಎಂಬ ವಿಷಯವನ್ನು ಅಂದಿನ ಮಾತುಕತೆಗೆ ಆರಿಸಿಕೊಂಡಿದ್ದೆ. ಈ ಆಯ್ಕೆಗೆ ಹಲವು ಬಲವಾದ ಕಾರಣಗಳೂ ಇತ್ತೆನ್ನಿ.

ನಮ್ಮ ನಾಡಿನ ಅನೇಕ ಹಾಸ್ಯ ಸಾಹಿತಿಗಳು ಸಾಕಷ್ಟು ಹಾಸ್ಯ ಸಾಹಿತ್ಯದ ಕೃಷಿಯನ್ನು ಮಾಡಿದ ನಂತರ ಆಧ್ಯಾತ್ಮದ ವ್ಯಾಸಂಗ ಸಾಧನೆಗಳತ್ತ ತಿರುಗಿರುವುದನ್ನು ನಾನು ನೋಡಿದ್ದೇನೆ. ರಾ.ಶಿ.ಯವರು ತಮ್ಮ ವಿಪುಲವಾದ ಹಾಸ್ಯ ಸಾಹಿತ್ಯ ಸೃಷ್ಟಿಯ ನಡುವೆಯೇ ಅಧ್ಯಾತ್ಮ ವಿಷಯಗಳಾದ ಆನಂದ, ಮೂವರು ಆಚಾರ್ಯರ ಸಂಕ್ಷಿಪ್ತ ಜೀವನ ಚರಿತ್ರೆ, ಸಾವು ಮತ್ತು ನಚಿಕೇತಸ್ ಇವುಗಳನ್ನು ಕುರಿತು ಗಹನವಾದ ಕೃತಿಗಳನ್ನು ಬರೆದರು. ಇವೇ ಅಲ್ಲದೇ ಭಯ ಎಂಬ ಇಮೋಷನ್ ಬಗ್ಗೆ ಒಂದು ವಿಶ್ಲೇಷಣೆಯನ್ನು ಪುಟ್ಟ ಪುಸ್ತಕದ ರೂಪದಲ್ಲಿ ತಂದದ್ದೇ ಅಲ್ಲದೆ, ಈ ಕುರಿತು ಒಂದು ಭಾಷಣ ಮಾಲೆಯನ್ನೇ ಸೃಷ್ಟಿಸಿದ್ದರು. ಒಂದೆಡೆ ರಾ.ಶಿ.ಯವರು ಮನನ್ ಕರ್ಕೇ ಆತ್ಮ ಜ್ಞಾನ್, ಹಸ್‌ಕೇ ಲೇಂಗೆ ಬ್ರಹ್ಮ ಜ್ಞಾನ್ ಎಂದು ಹೇಳಿ ಆಧ್ಯಾತ್ಮಕ್ಕೂ ಹಾಸ್ಯ ಪ್ರಜ್ಞೆಗೂ ಇರುವ ಗಹನವಾದ ನಂಟಿನ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಖ್ಯಾತ ನಗೆಗಾರ ನಾ. ಕಸ್ತೂರಿಯವರು ತಮ್ಮ ಜೀವಿತದ ಸಂಧ್ಯಾಕಾಲದಲ್ಲಿ ಶ್ರೀ ಸತ್ಯ ಸಾಯಿಬಾಬಾ ಅವರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದೇ ಅಲ್ಲದೇ, ಅವರ ಬಗ್ಗೆ ಅನೇಕ ಪುಸ್ತಕಗಳನ್ನೂ ಬರೆದರು. ಕೈಲಾಸಂ ಅವರ ಗಂಭೀರ ಸಾಹಿತ್ಯ ಬಹುಶಃ ಅನೇಕರಿಗೆ ಪರಿಚಯವಿಲ್ಲದಿರಲು ಸಾಧ್ಯ. ಕರ್ಣ, ಭೀಷ್ಮ, ಏಕಲವ್ಯ ಇವರುಗಳ ಬಗ್ಗೆ ಇಂಗ್ಲೀಷಿನಲ್ಲಿ ಬರೆದಿರುವ ನಾಟಕಗಳು ಬಹು ಸತ್ವಯುತವಾಗಿದ್ದು ಕೈಲಾಸಂ ಅವರ ಆಳವಾದ ಆಧ್ಯಾತ್ಮಿಕ ಚಿಂತನೆಗೆ ಉತ್ತಮ ನಿದರ್ಶನಗಳಾಗಿವೆ.

ಇನ್ನು ನಮ್ಮ ಬಳಗದವರೇ ಆದ ಅ.ರಾ.ಸೇ. ಅವರ ನಗೆ ಸಾಹಿತ್ಯ ಎಷ್ಟು ಹೇರಳವಾಗಿರುವುದೋ ಅದಕ್ಕೂ ಮಿಗಿಲಾಗಿ ಅವರು ಬರೆದಿರುವ ಆಧ್ಯಾತ್ಮಿಕ ಕೃತಿಗಳನ್ನು ನಿದರ್ಶಿಸಬಹುದು. ಪರಮಾರ್ಥ ಪದಕೋಶ, ಬ್ರಹ್ಮಸೂತ್ರಗಳು, ಶ್ರೀಗುರು ಕಥಾಮೃತ ಈ ಎಲ್ಲ ಪುಸ್ತಕಗಳೂ ಅರಾಸೇ ಅವರಿಗೆ ಆಧ್ಯಾತ್ಮದ ಬಗ್ಗೆ ಇರುವ ಒಲವನ್ನು ಸೂಚಿಸುತ್ತವೆ.

ಈ ಎಲ್ಲ ವಿಷಯಗಳನ್ನು ಮನನ ಮಾಡಿದಾಗ ನನಗೆ ಅನ್ನಿಸಿದ್ದು ಇಷ್ಟು. ಹಾಸ್ಯ ಸಾಹಿತ್ಯ ಸೃಷ್ಟಿಸಬೇಕಾದರೆ ಮುಖ್ಯವಾದ ಕ್ವಾಲಿಫಿಕೇಷನ್ ಅಂದರೆ ತಮ್ಮನ್ನು ತಾವೇ ಗೇಲಿಮಾಡಿಕೊಂಡು ನಗುವ ಗುಣ. ಅಹಂಕಾರ ಇಲ್ಲದ ಮನಕ್ಕೆ ಮಾತ್ರ ಇದು ಸಾಧ್ಯ. ಆಧ್ಯಾತ್ಮ ಸಾಧನೆಯ ಹಾದಿಯಲ್ಲಿಯೂ ಸಹಾ, ಅಹಂಕಾರ ಕರಗಿಸುವುದು ಮೊದಲ ಹೆಜ್ಜೆ ಎನ್ನುತ್ತಾರೆ ತಿಳಿದವರು. ಹಾಸ್ಯ ಸಾಹಿತಿಯು ಲೌಕಿಕ ವಿಷಯಗಳನ್ನು ಗಂಭೀರವಾಗಿ ಗಣಿಸದೇ ಅವುಗಳನ್ನು ಅಣಕಿಸಿ, ಗೇಲಿಮಾಡಿ ಜನರನ್ನು ನಗಿಸುತ್ತಾನೆ. ಲೌಕಿಕ ವಿಷಯಗಳಿಗೆ ಅಷ್ಟು ಪ್ರಾಶಸ್ತ್ಯ ಕೊಡದೇ ಪರಮಾರ್ಥದ ಕಡೆ ಮುಖ ತಿರುಗಿಸುವುದು ಆಧ್ಯಾತ್ಮದ ಹಾದಿಯಲ್ಲಿನ ಒಂದು ಹೆಜ್ಜೆ. ಈ ಎಲ್ಲ ಸಾಮ್ಯಗಳನ್ನೂ ನನಗೆ ತಿಳಿದಂತೆ ಅಲ್ಲಿ ಅಂದಿನ ಸಭೆಗೆ ಪ್ರಾಮಾಣಿಕವಾಗಿ ತಿಳಿಸಿದೆ. ಭಾಷಣವೆಲ್ಲಾ ಮುಗಿದ ಮೇಲೆ ಒಬ್ಬರು ಎದ್ದು ನಿಂತು, ನಿತ್ಯಾನಂದ ಸ್ವಾಮಿಗಳ ಬಗ್ಗೆ ಏನು ಹೇಳುತ್ತೀರಿ? ಎಂದು ಠೀವಿಯಿಂದ ಕೇಳಿ, ನೆರೆದಿದ್ದ ಸಭಿಕರತ್ತ ತಿರುಗಿ ಒಂದು ಮುಗುಳ್ನಗೆ ಬೀರಿದರು.

''ನಾನೇನು ಹೇಳಲಿ?'' ಎಂದೆ ನಾನು.

ವಿಜಯಾ ಅವರ ಪುಸ್ತಕ ತುಂಬಾ ಚೆನ್ನಾಗಿ ಮೂಡಿಬಂದಿದೆ. ಮುಕ್ಕಾಲು ಪಾಲು ಲೇಖನಗಳೆಲ್ಲವೂ ಅಪರಂಜಿಯಲ್ಲಿ ಪ್ರಕಟವಾಗಿರುವ ಲೇಖನಗಳೇ. ವಿಜಯಾ ಅವರದ್ದು ನನಗೆ ಬಹು ಹಳೆಯ ಪರಿಚಯ ಹಾಗೂ ಗೆಳೆತನ. ನಮ್ಮಕ್ಕ ದಿವಂಗತ ಕಮಲಾ ರಾಮಸ್ವಾಮಿಯವರ ಬಹು ಪ್ರೀತಿಯ ಗೆಳತಿ ವಿಜಯಾ ಸಚ್ಚಿದಾನಂದ್. ಅಪರಂಜಿಯ ಬಾಲ್ಯದಿಂದ ಲೇಖನಗಳನ್ನು ನೀಡಿ ಈಕೆ ಪತ್ರಿಕೆಯನ್ನು ಪೋಷಿಸಿಕೊಂಡು ಬಂದಿದ್ದಾರೆ. ಹಾಸ್ಯಪ್ರಜ್ಞೆ ವಿರಳವಾಗಿರುವ ಈ ದಿನಗಳಲ್ಲಿ ವಿಜಯಾರವರು ನಗೆಸಾಹಿತ್ಯ ವ್ಯವಸಾಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಸಂಕಲನವನ್ನು ಹೊರತಂದಿರುವುದಕ್ಕೆ ಅಪರಂಜಿ ಬಳಗದ ಪರವಾಗಿ ಸನ್ಮಾನ್ಯ ಲೇಖಕಿಯವರಿಗೆ ಹಾರ್ದಿಕ ಅಭಿನಂದನೆಗಳು.

- ಶಿವಕುಮಾರ್

ಮದುವೆ ಮಂಟಪದ ಗೊಂದಲ

- ಅರುಂಧತಿ ಜೋಶಿ

ಬೇಗ ಹೊರಡಿ, ಮುಹೂರ್ತ ಮುಗಿದ ಮೇಲೆ ಹೋದರೆ, ಏನ್ಸೆನ್ಸಾಗಿರುತ್ತೆ ಹೇಳಿ. ನಾನು ರೆಡಿಯಾಗಿ ಆಗಲೇ ಅರ್ಧ ಗಂಟೆ ಆಯ್ತು. ಯಾವಾಗ್ಲೂ ಹೆಣ್ಮಕ್ಳು ಅಲಂಕಾರಕ್ಕೆ ಕೂತ್ರಂದ್ರೆ ವೇಳೆಗೆ ಸರಿಯಾಗಿ ಹೊರಡೋದಿಕ್ಕಾಗೋಲ್ಲ ಎಂದು ನೀವೇ ಟೀಕಾ ಮಾಡ್ತಿರ್ತೀರಿ. ಈಗ ನೋಡಿದ್ರೆ ಇನ್ನೂ ನೀವೇ ರೆಡಿಯಾಗಿಲ್ಲ, ಟಿ.ವಿ. ಆರಿಸಿ ಬೇಗ ರೆಡಿಯಾಗಿ, ಹೇಳಿ ಕೇಳಿ ಅವರು ನಿಮ್ಮ ಫ್ರೆಂಡು. ಮಗಳ ಮದುವೆ ಮಾಡ್ತಿದಾನೇಂತ ಎಷ್ಟು ಸಂಭ್ರಮದಿಂದ ಮದುವೆ ಮಂಟಪದ ಅಡ್ರೆಸ್, ಯಾವ ಬಸ್ ಹಿಡಿಬೇಕು, ಹೇಗೆ ತಲುಪಬೇಕೆಂದೆಲ್ಲ ಪ್ಲಾನ್ ಹಾಕಿಕೊಂಡಿದ್ರಿ. ಈಗ ನೋಡಿದ್ರೆ ಹೀಗೆ ಕುಳಿತುಬಿಟ್ರೆ ಹೇಗೆ? ಹುಷಾರಾಗಿದೀ.....

ವಟ ವಟಾಂತ ನನ್ನ ಶ್ರೀಮತಿ ಪದ್ಮಾವತಿ ಒದರ್ತಾನೇ ಇದ್ರೂ ನಂಗ್ಯಾಕೋ ಒಂದ್ರೀತಿಯ ಆಲಸ್ಯ ಆವರಿಸಿಕೊಂಡಿತ್ತು. "ಆಯ್ತು ಬಿಡು, ಈಗ್ಲೇ ರೆಡಿಯಾಗ್ತೀನಿ" ಎಂದು ಟಿ.ವಿ. ಬಂದ್ ಮಾಡಿ ಮೇಲೆದ್ದೆ. ನಾನು ರೆಡಿಯಾಗಿ ಹೊರಡುವುದಕ್ಕೆ ಮುಂದಾದಾಗ, ಆಮಂತ್ರಣ ಪತ್ರಿಕೆ ಜೊತೆಗಿದ್ರೆ ಒಳ್ಳೆಯದೆಂದು ಮನೆಯಲ್ಲ ಹುಡುಕಿದ್ರೂ ಎಲ್ಲಿಟ್ಟೆನೆಂದು ನೆನಪಾಗ್ಲೇ ಇಲ್ಲ, ಎಲ್ಲೋ ಇಟ್ಟು ಮರೆತಿದ್ದೆ.

ಆಮಂತ್ರಣ ಪತ್ರಿಕೆಯ ಹಿಂಭಾಗದಲ್ಲಿ ಎಲ್ಲೋ ದೂರದ ಬಡಾವಣೆಯಲ್ಲಿ ಮದುವೆ ಮಾಡುವಾಗ, ಅದರ ನಕಾಶೆ, ಸವಿಸ್ತಾರವಾಗಿ ಎಲ್ಲಿಂದ ಯಾವ ಬಸ್ಸು, ಯಾವ ರಸ್ತೆ, ಯಾವ ಅಡ್ಡರಸ್ತೆ, ಲ್ಯಾಂಡ್‌ಮಾರ್ಕ್ ಎಲ್ಲವನ್ನೂ ಛಾಪಿಸಿರ್ತಾರೆ. ಬೆಂಗಳೂರು ನಗರದ ಬೆಳವಣಿಗೆ ಅಡ್ಡ ಅಗಲವಾಗಿ ಎಲ್ಲಿಂದೆಲ್ಲೆಲ್ಲೋ ಹರಡಿ ಬೃಹದಾಕಾರವಾಗಿ ಬೆಳೆದು ಬೃಹತ್ ಬೆಂಗಳೂರು ಆದಮೇಲೆ ಬಡಾವಣೆಗಳ ಹೊಸ ಹೊಸ ನಾಮಧೇಯಗಳೂ ಸಹ ನಮಗೆ ತೀರ ಹೊಸತಾಗಿ ಕಾಣುತ್ತವೆ.

ಯಾವ ಬಸ್ಸನ್ನು ಹಿಡಿದು, ಹೇಗೆ ಅಲ್ಲಿಗೆ ತಲುಪಬೇಕೆನ್ನುವುದು ನೆನಪಿನಲ್ಲಿ ಉಳಿದಿತ್ತು. ಧೈರ್ಯ ತಂದುಕೊಂಡು ಹೊರಟೆವು. ನಾವು ಬಸ್ ಸ್ಟಾಪನ್ನು ತಲುಪಿದಾಗ 255 ಬಿ ನಂಬರಿನ ಬಸ್ಸು ಹೊರಡಲು ತಯಾರಾಗಿ ನಿಂತಿತ್ತು. ಕೆಂಗೇರಿ ಕಡೆ ಹೋಗುವ ಈ ಬಸ್ಸಿನಲ್ಲಿ ಹತ್ತಿ ಕುಳಿತಾಗ ನಿರಾಳವೆನಿಸಿತು. ನಾವು ಇಳಿಯಬೇಕಾದ ಸ್ಥಳಕ್ಕೆ ಟಿಕೆಟ್ ಖರೀದಿ ಮಾಡಿದೆವು. ಹಾಗೂ ಹೀಗೂ ಸ್ವಲ್ಪ ಹೊತ್ತು ಒದ್ದಾಡಿದ ಮೇಲೆ ಇಬ್ಬರಿಗೂ ಕುಳಿತುಕೊಳ್ಳಲು ಸೀಟಂತೂ ಸಿಕ್ತು. ಇವಳ ಅಲಂಕಾರಕ್ಕೆ ಭಂಗ ಬರಬಾರದೆಂದು ನಾನು ಮುದುಡಿ ಕುಳಿತಿದ್ದೆ. ಮೇಲು ಸೇತುವೆ ದಾಟಿ ವರ್ತುಲ ರಸ್ತೆಯನ್ನು ತಲುಪಿದಾಗ, ಬಸ್ಸು ಸಡನ್ ಬ್ರೇಕು ಹಾಕಿ ನಿಂತಿತು. "ಬ್ರೇಕ್ ಇನ್ಸ್ಪೆಕ್ಟರ್" - ಯಮಧರ್ಮರಾಯನ ವಾಹನ ರಸ್ತೆಯಲ್ಲಿ ಬಿಸಿಲು ಕಾಯಿಸಿಕೊಳ್ತಿತ್ತೇನೋ! ಬ್ರೇಕು ಹಾಕಿದಾಗ ಮುಗ್ಗರಿಸುವ ಹಾಗಾದಾಗ ಮುಂದಿನ ಸೀಟಿನ ಸ್ಟೀಲ್ ಸರಳಿಯನ್ನು ಹಿಡಿದುಕೊಂಡಿದ್ದರಿಂದ ಸಧ್ಯ! ಮುಖ ಜಜ್ಜದೇ ಬಚಾವಾದ್ವಿ. ಮತ್ತೆ ಬಸ್ಸು ಹೊರಟಾಗ ಆಗಲೇ ಗಂಟೆ ಹನ್ನೆರಡಾಗಿತ್ತು.

"ಮುಹೂರ್ತ 12-30ಕ್ಕೆ. ಊಟದ ಹೊತ್ತಿಗಾದ್ರೂ ಹೋಗಿ ತಲುಪಿದರೆ ನಮ್ಪುಣ್ಯ" ಸಹಧರ್ಮಿಣಿಯ ಆತಂಕ ಅರ್ಥವಾದ್ರೂ ನಮ್ಮ ಸ್ಟಾಪು ಬರುವವರೆಗೂ ಏನ್ಮಾಡ್ಲಿಕ್ಕಾಗುತ್ತೆ. ಅಂತೂ ಇಂತೂ ನಾವು ಇಳಿಯುವ ಸ್ಥಳದಲ್ಲಿ ಇಳಿದು ಎಡಗಡೆಯಿರುವ ರಸ್ತೆಯಲ್ಲಿ ತಿರುಗಿ ಸೀದಾ ಮುಂದೆ ಹೋಗಿ, ಒಂದು ಮಾಲ್ ಸಿಕ್ಕಾಗ ಅಲ್ಲಿ ಬಲಗಡೆ ತಿರುಗಿ ಮತ್ತೆ ಎಡಗಡೆಗೆ ತಿರುಗಿದಾಗ ನಮ್ಮ ತಲೆ ತಿರುಗಿದ ಹಾಗೆ ಆದರೂ ಸುಧಾರಿಸಿಕೊಂಡೆವು.

ಮುಂದೆ ಸಾಲಾಗಿ ಮೂರು ಛತ್ರಗಳು ಅರ್ಥಾತ್ ಮದುವೆ ಮಂಟಪಗಳು ಎದುರಾದವು. ಗಿರಿಜಾ ಕಲ್ಯಾಣ ಮಂಟಪ, ಗಿರಿಜಾಶಂಕರ ಕಲ್ಯಾಣ ಮಂಟಪ, ಶಂಕರ ನಾರಾಯಣ ಕಲ್ಯಾಣ ಮಂದಿರ. ಹಾಗೇ ನೋಡ್ತಾ ನಿಂತ್ರೆ ನನ್ನ ಮಿತ್ರ ದಾಮೋದರನ ಮಗಳ ಮದುವೆ ಎಲ್ಲಿ ನಡೀತಿರಬಹುದೆಂದು ಹೇಗೆ ಊಹಿಸೋದಕ್ಕೆ ಆಗುತ್ತೆ? ಎಷ್ಟು ತಲೆ ಕೆಡಿಸಿಕೊಂಡ್ರೂ ಕಲ್ಯಾಣ ಮಂಟಪದ ಹೆಸರು ನೆನಪಾಗಲೇ ಇಲ್ಲ. ಶಂಕರ ಎನ್ನುವ ನನ್ನ ಹೆಸರಷ್ಟೇ ನೆನಪಿನಲ್ಲಿತ್ತು. "ಆಮಂತ್ರಣ ಪತ್ರಿಕೆ ನಮ್ಹತ್ರ ಇರಬೇಕಾದರೆ ವಿವರಗಳೆಲ್ಲ ಅದ್ರಲ್ಲೇ ಇರುತ್ತಲ್ಲ ಹಾಗಾಗಿ ನಾನೂ ಹೆಚ್ಚು ಹಚ್ಕೊಂಡು ತಲೆ ಕೆಡಿಸಿಕೊಳ್ಳಲಿಲ್ಲ, ಈಗೇನ್ರೀ ಮಾಡೋದು? ಹುಡುಗಿ ಹೆಸರಾದ್ರೂ ನೆನಪಿದೆಯಾ ಹೇಳಿ. ನಿಮ್ಮ ಫ್ರೆಂಡ್ ಹೆಸರಷ್ಟೇ ಗೊತ್ತಿದ್ರೆ ಸಾಲದು. ಹೊರಗೆ ಗೇಟಿನ ಮೇಲೆ ಅಲಂಕಾರವಾಗಿ ಹೂವಿನ ಜೋಡಣೆಯಲ್ಲಿ ಮಧುಮಕ್ಕಳ ಹೆಸರಷ್ಟೇ ಹಾಕಿರ್ತಾರಲ್ರೀ. ಈ ರೀತಿಯ ಸಂದಿಗ್ಧದಲ್ಲಿ ಸಿಕ್ಹಾಕ್ಕೊಂಡು ನಾವೇ ಒದ್ದಾಡಬೇಕು. 60ಕ್ಕೆ ಅರಳು ಮರಳು ಎಂದು ಹೇಳ್ತಾರೆ. ಜ್ಞಾಪಕ ಶಕ್ತಿ ಸಹ ವಯಸ್ಸಾದ ಹಾಗೆ ತುಕ್ಕು ಹಿಡಿಯತ್ತೇಂತ ಈಗ ನನಗೂ ಅನಿಸುತ್ತೆ."

ಒಂದೇ ಸಮನೆ ಏದುಸಿರು ಬಿಡುತ್ತ ಮಾತಾಡ್ತಿರೋವಳ್ನ ಹ್ಯಾಗೆ ಸಮಾಧಾನ ಮಾಡ್ಲಿ? ನನ್ನ ಪೇಚಾಟ ನನಗೆ ಗೊತ್ತು. ಕೈ ಕೈ ಹಿಸುಕಿ ತಲೆ ಕೆರೆದುಕೊಂಡ್ರೂ ಎಲ್ಲವೂ ಮರೆತುಹೋದ ಹಾಗಾಗಿತ್ತು.

"ಏನಿಲ್ಲ ಬಿಡು. ಶಂಕರ ನಾರಾಯಣ ಕಲ್ಯಾಣ ಮಂದಿರಾನೇ ಇರ್ಬೇಕು. ಒಳಗೆ ಹೋಗೋಣ ನಡಿ. ಖಂಡಿತ ನನ್ನ ಫ್ರೆಂಡ್ ಅಲ್ಲೇ ಇರ್ತಾನೆ." ಭವಿಷ್ಯ ಹೇಳುವವನ ಹಾಗೆ ನುಡಿದೆ. ಸೀದಾ ಒಳಗೆ ನಡೆಯುವಾಗ "ಒಳ್ಳೆ ಕಾರ್ಯಕ್ಕೆ ಬಂದಿದ್ದೇವೆ. ಮೀನ ಮೇಷ ನೋಡ್ಲಿಕ್ಕೆ ಆಗುತ್ತಾ? ಒಳಗೆ ಹೋದಾಗ ಅವರಿವರ್ನ ನೋಡ್ತಾ ನಿಂತ್ಕೋಬೇಡಿ" ಎಂದು ಶ್ರೀಮತಿಯವರ ತಾಕೀತು ಹೊರಬಿತ್ತು.

ಅಲಂಕೃತ ಆಸನಗಳ ಮೇಲೆ ಈಗಾಗಲೇ ನವ ದಂಪತಿಗಳು ಆಸೀನರಾಗಿದ್ದರು. ಹುಡುಗ ಹುಡುಗಿಯನ್ನು ಸಾರಿ! ಮದುಮಕ್ಕಳನ್ನು ಹರಸಲು ಇಷ್ಟ ಮಿತ್ರ ಬಂಧುಗಳು ಕ್ಯೂನಲ್ಲಿ ನಿಂತಿದ್ದರು ನಾವೂ ಹೋಗಿ ಕ್ಯೂನಲ್ಲಿ ನಿಂತು ನಮ್ಮ ಸರದಿಗಾಗಿ ಕಾಯುತ್ತ ನಿಂತೆವು.

ನನ್ನ ಮಿತ್ರ ದಾಮೋದರನನ್ನು ಬಿಟ್ಟರೆ ಉಳಿದವರ್ಯಾರ ಪರಿಚಯ ನನಗಿರಲಿಲ್ಲ. ನಮ್ಮ ಮಿತ್ರ ಮಂಡಳಿಯು 99% ಮಿತ್ರರು, ಹಿಂದಿನ ದಿನ ಜರುಗಿದ ಆರತಕ್ಷತೆಗೆ ಅಂದರೆ ಈಗಿನ ಫ್ಯಾಶನ್ನಿನಂತೆ ಲಗ್ನಕ್ಕಿಂತ ಮೊದಲು ವಧೂವರರನ್ನು ಪರಿಚಯಿಸುವ ಸಂಭ್ರಮದ

ಆರತಕ್ಷತೆಯಲ್ಲಿ ಭಾಗವಹಿಸಿ ವಧು ಮಕ್ಕಳನ್ನು ಆಶೀರ್ವದಿಸಲು ಬಂದಿದ್ದರು ಅಂಜೆಯ ನಿಸ್ಸರ್, ಅವರಲ್ಲೂ ಮದುವೆ ಮನೆಯ ಊಟವೆಂದರೆ ನಮ್ಮ ವಯಸ್ಸಿನಲ್ಲಿ ಅರಗಿಸಿಕೊಳ್ಳುವುದು ಕಷ್ಟ.

''ಯದ್ ರೋಚತೇ ತದ್ ಗ್ರಾಹ್ಯಂ'' ಎಂದು ಯೋಚಿಸಿ ಮುಹೂರ್ತಕ್ಕೆ ಹೋಗಿ ಬರುವುದು ಉತ್ತಮವೆನಿಸಿತು. ಲಕ್ಷಣವಾಗಿ ಮುಹೂರ್ತಕ್ಕೆ ಹೋಗಿ ಅಕ್ಕಿ ಕಾಳು ಹಾಕಿ ಹರಸಿ ಬಂದರಾಯ್ತೆಂದುಕೊಂಡು ನಮ್ಮ ತೀರ್ಮಾನವನ್ನು ಜಾರಿಗೊಳಿಸಿದೆವು. ನಮ್ಮ ಸರದಿ ಬರುವಷ್ಟರಲ್ಲಿ ಮಂಡಿ ನೋವು ಹೆಚ್ಚಾಯಿತು. ಆದರೂ ನಮ್ಮ ಸಹನೆಯ ಪರೀಕ್ಷೆಯಲ್ಲಿ ಪಾಸಾಗಿ ನವ ದಂಪತಿಗಳ ಮುಂದೆ ನಿಂತು ವಧುವಿಗೆ ನಾವು ಕೊಡಬೇಕೆಂದಿದ್ದ ಉಡುಗೊರೆಯನ್ನು ಕೊಟ್ಟು ಆಶೀರ್ವಾದ ಮಾಡಿದೆವು.

''ಅಪ್ಪ ಎಲ್ಲಮ್ಮ ಕಾಣ್ತಿಲ್ಲವಲ್ಲ?'' ಎಂದು ವಧುವನ್ನು ಕೇಳಿದೆ. ''ಇಲ್ಲೇ ಎಲ್ಲೋ ಇರಬೇಕು ನೋಡಿ ಅಂಕಲ್'' ಎಂದು ಉತ್ತರ ಬಂದಾಗ, ಊಟಕ್ಕೆ ಸಾಕಷ್ಟು ನೂಕು ನುಗ್ಗಲು ಇದ್ದಿದ್ದನ್ನು ನೋಡಿ, ಕಾದರೆ ತಡವಾಗಬಹುದೆಂದು ಊಟದ ಕ್ಯೂನಲ್ಲಿ ನಿಂತೆವು. ''ಊಟದ ಪಂಕ್ತಿಯಲ್ಲಿ ಮುಂದಾಳಾಗಿರಬೇಕು, ಯುದ್ಧಭೂಮಿಯಲ್ಲಿ ಹಿಂದಾಳಾಗಿರಬೇಕು'' ಎನ್ನುವ ಉಕ್ತಿ ನೆನಪಾಯಿತು. ಊಟ ಮುಗಿಸಿ ದಾಮುವನ್ನು ಅಭಿನಂದಿಸಿದರೆ ಸಾಕೆಂದುಕೊಂಡೆ.

ಎಂಥ ಕಾಲ ಬಂತಪ್ಪಾ! ಎಲ್ಲದಕ್ಕೂ ಕ್ಯೂ. ಹರಸುವುದಕ್ಕೆ ಕ್ಯೂ - ತಿನ್ನುವುದಕ್ಕೆ ಕ್ಯೂ. ಡೈನಿಂಗ್‌ಹಾಲ್ ತಲುಪಿದ ಮೇಲೆ ಬಂದಿರುವ ಅತಿಥಿಗಳು ಸೀಟು ಹಿಡಿಯಲು ಮಾಡುತ್ತಿದ್ದ ಕಸರತ್ತು, ಮಾಡಿದ ಹರಸಾಹಸ, ಯಾಕೋ ಏನೋ ನನ್ನ ತುಲನಾತ್ಮಕ ಪರಿಶೀಲನೆಯನ್ನು ಜಾಗೃತಗೊಳಿಸಿತು. ನಮ್ಮ ಜನ ಪ್ರತಿನಿಧಿಗಳು ಕುರ್ಚಿಗಾಗಿ ಮಾಡುವ ತಂತ್ರ ಕುತಂತ್ರಗಳು ನೆನಪಾಯಿತು. ಒಂದು ರೀತಿಯ ಮ್ಯೂಸಿಲ್ ಚೇರಂತಲೂ ಹೇಳಬಹುದು. ಸೀಟು ಹಿಡಿದು ಕುಳಿತ ಮೇಲೆ ನಮ್ಮ ನಿಜವಾದ ಪರದಾಟ ಶುರುವಾಯಿತು ನೋಡಿ! ಹೇಳಿ ಕೇಳಿ ಮದುವೆಯ ಮನೆ, ಬಗೆ ಬಗೆಯ ವ್ಯಂಜನಗಳು, ಜೊತೆಗೆ ರಾಗಿ ಮುದ್ದೆ ಅವರೇಕಾಯಿ ಹುಳಿ ಸ್ಪೆಷಲ್ ಐಟಂ ಆಗಿ ಎಲೆಯ ಮೇಲೆ ಬಿದ್ದಾಗ ನಮಗೆ ಎಚ್ಚರವಾಯಿತು. ಯಾಕೋ ಎಲ್ಲೋ ಎಡವಟ್ಟಾದಂತಿತ್ತು. ಇದು ಖಂಡಿತ ದಾಮು ಮನೆ ಮದುವೆ ಅಲ್ಲ. ಹೀಗ್ಯಾಕೆ ಡಯಬಿಟಿಕ್ ಡಯಟ್ ತರಹ ರಾಗಿಮುದ್ದೆ ಸ್ಪೆಷಲ್, ಮದುವೆಯ ಮನೆಯ ಊಟದಲ್ಲೊಂದು ಆಶ್ಚರ್ಯಾನೂ ಆಯಿತು. ನಾವು ಸರಿಯಾದ ಕಲ್ಯಾಣ ಮಂಟಪದಲ್ಲಿರದೇ ಬೇರೆ ಕಡೆಗೆ ಬಂದಿದ್ದೇವೆನ್ನುವ ಸಂಶಯ ಬಲವಾಯಿತು.

ಆದರೇನು ಮಾಡುವುದು. ಕುಳಿತ ಮೇಲೆ ಹೊಟ್ಟೆಯ ಪೂಜೆ ನೈವೇದ್ಯ ಮುಗಿಯಬೇಕಲ್ಲ. ''ಈಗ ಎದ್ದು ಹೋದರೆ ಆಭಾಸವಾದೀತೆಂದು ನನಗೆ ಅನಿಸುತ್ತೆ. ಸುಮ್ಮನೆ ನಿಮಗೆ ಇಷ್ಟ ಬಂದದ್ದನ್ನು ತಿಂದು ಮೇಲೆದ್ದುಬಿಡಿ.'' ಸಹಧರ್ಮಿಣಿಯ ಪಿಸು ಧ್ವನಿಯ ಸಲಹೆ ಸರಿಯೆನಿಸಿತು. ತಾಂಬೂಲವನ್ನು ಸ್ವೀಕರಿಸಿ ಹೊರಗೆ ಬಂದಾಗ ಬಹುತೇಕ ದಾಮುವಿನ ಮಗಳ ಮದುವೆ ಗಿರಿಜಾಶಂಕರ ಕಲ್ಯಾಣ ಮಂಟಪದಲ್ಲಿರಬಹುದೆನಿಸಿತು. ಈಗ

ಇಷ್ಟು ತಡವಾದ ಮೇಲೆ ಮತ್ತೆ ಇನ್ನೊಂದು ಸಲ ನಮ್ಮ ಅದೃಷ್ಟಪರೀಕ್ಷೆಯನ್ನು ಮಾಡುವುದಕ್ಕೆ ಹಿಂದೇಟು ಹಾಕುತ್ತ ಕಲ್ಯಾಣ ಮಂಟಪವನ್ನು ಹಾದು ಹೋಗುವಾಗ ನನ್ನ ವಿಚಾರ ಲಹರಿಯ ತರ್ಕ ಶುರುವಾಯಿತು.

ನಾವು ನುಗ್ಗಿದ ಮದುವೆ ಮನೆಯಲ್ಲಿ ಯಾರ ಮದುವೆಯಿತ್ತೋ ಗೊತ್ತಿಲ್ಲ. ನವದಂಪತಿಗಳನ್ನಂತೂ ಹರಸಿ ಬಂದಿದ್ದೆವು. ಊರು ಕೇರಿ ಪರಿಚಯವಿಲ್ಲದಿದ್ದರೂ ಸಭ್ಯರಾಗಿ ಗಣ್ಯರಾಗಿ ಕಂಡಿದ್ದರಿಂದ, ಅದರಲ್ಲೂ ಭಾರೀ ಜರತಾರಿ ಸೀರೆಯನ್ನುಟ್ಟು ಒಡವೆಗಳನ್ನು ಹೇರಿಕೊಂಡು ಗೌರಮ್ಮನ ಹಾಗೆ ಅಲಂಕಾರ ಮಾಡಿಕೊಂಡಿದ್ದ ಪದ್ದು ನನ್ನ ಜೊತೆಯಲ್ಲಿದ್ದಾಗ ಸಂಶಯ ಹೇಗೆ ಬರುತ್ತೆ! ಅವಳು ಹಾಕಿಕೊಂಡಿದ್ದ ಒಡವೆಗಳೆಲ್ಲ ಅಪ್ಪಟ ಚಿನ್ನದ್ದೋ, 1 ಗ್ರಾಂ ಬಂಗಾರದ್ದೋ ಗೊತ್ತಿಲ್ಲ. ನಾನಂತೂ ಅವಳನ್ನು ಈ ವಿಚಾರವಾಗಿ ಪ್ರಶ್ನೆ ಮಾಡುವುದು ಸಾಧ್ಯವಿಲ್ಲ. ಇದು ಹೆಂಗಸರ ಹೋಮ್ ರೂಲ್ನಡಿಯಲ್ಲಿರುವ ಗೃಹ ಇಲಾಖೆ ಎಂದು ಪದೇ ಪದೇ ನನ್ನ ಗಮನಕ್ಕೆ ಬರುತ್ತಿರುವ ಸಂಗತಿ.

ಪರಿಚಿತರ್ಯಾರು, ಅಪರಿಚಿತರ್ಯಾರು ಎಂದು ಆ ಮದುವೆ ಮನೆ ಗಲಾಟೆಯಲ್ಲಿ ಯಾರು ನಿಂತು ತಪಾಸಣೆ ಮಾಡ್ತಾರೆ ಹೇಳಿ. ಇದರಲ್ಲಿ ವಿಶೇಷವೇನೆಂದರೆ ಊಟ ಮಾಡುವವರೆಗೂ ನಮಗೆ ಅಪರಿಚಿತರ ಮನೆಯ ಲಗ್ನಕ್ಕೆ ನಾವು ಬಂದಿದ್ದೇವೆಂದು ಗೊತ್ತಾಗಲಿಲ್ಲ. ಊಟ ಮಾಡುವಾಗಷ್ಟೇ ಪದ್ದು ನಮ್ಮ ಪೆದ್ದುತನವನ್ನು ಪತ್ತೆ ಹಚ್ಚಿದ್ದಳು.

ಹೊರಗೆ ಬಂದು ಗಿರಿಜಾಶಂಕರ ಕಲ್ಯಾಣ ಮಂಟಪವನ್ನು ಹಾದು ಹೋಗುವಾಗ ಎದುರಿನಲ್ಲೇ ದಾಮೋದರ ಸಿಕ್ಕಿದರು. ಯಾರನ್ನೋ ಬೀಳ್ಕೊಡಲು ಹೊರಗಡೆ ಬಂದಿದ್ದರೆಂದು ಕಾಣುತ್ತೆ.

"ಆಗಲೇ ಊಟ ಮುಗಿಸಿ ಹೊರಟುಬಿಟ್ರಾ? ತಾಂಬೂಲ ಕೈಯಲ್ಲಿದೆ. ಆದರೆ ತಾಂಬೂಲದ ಚೀಲ ನಮ್ಮ ಮದುವೆಯದ್ದಲ್ಲವೆಂದು ಅನಿಸುತ್ತೆ ಇನ್ನೊಂದು ಮದುವೆಗೆ ಹೋಗಿ ಬಂದ ಹಾಗಿದೆ" ಎಂದು ನನ್ನ ಬೆನ್ನು ನೇವರಿಸಿದರು. ಪೆಚ್ಚುಮೋರೆ, ಜೋಲು ಮುಖ ನೋಡಿ ಅವರಿಗೆ ಗೊತ್ತಾಗಿರಬೇಕು. "ಅಲ್ಲ, ಶಂಕರನಾರಾಯಣ ಛತ್ರ ಎಂದು ತಪ್ಪು ಲೆಕ್ಕ ಹಾಕ್ಕೊಂಡ್ಬಿಟ್ಟೆ" ಎಂದು ತನ್ನ ತಪ್ಪೊಪ್ಪಿಗೆ ಕೇಳಿ "ಹೋಗಲಿ ಬಿಡು ಶಂಕರ. ನಿನ್ನೆಸರು ಕಲ್ಯಾಣ ಮಂಟಪಕ್ಕಿರೋದು ಈ ಗೊಂದಲಕ್ಕೆ ಕಾರಣವಾಯ್ತಲ್ವೇ! ಈ ವಯಸ್ಸಿನಲ್ಲಿ ಇದೆಲ್ಲ ಸಹಜ ಬಿಡು. ಒಳಗೆ ನಡೀರಿ ನಮ್ಮನೆಯವರಿಗೆ, ಮಧುಮಕ್ಕಳಿಗೆ ನಿಮ್ಮ ಪರಿಚಯ ಮಾಡಿಸುತ್ತೇನೆ" ಎಂದು ಬಲವಂತವಾಗಿ ಛತ್ರದೊಳಗೆ ಕರೆದುಕೊಂಡು ಹೋದರು.

ನಾವು ತಂದ ಉಡುಗೊರೆ ಬೇರೆ ವಧುವಿನ ಕೈ ಸೇರಿತ್ತು. ಈ ವಧುವಿಗೆ ಜೇಬಿನಿಂದ ಗರಿಗರಿ ನೋಟು ಎರಡನ್ನು ತೆಗೆದು ತಾಂಬೂಲದ ಜೊತೆಯಲ್ಲಿ ಕೊಟ್ಟು ಹರಸಿದಾಗ ಬಂದ ಹಾದಿಗೆ ಸುಂಕವಿಲ್ಲ ಅಂದ ಹಾಗೆ ಆಯಿತು. ನಮ್ಮ ಎಡವಟ್ಟು ಸಾಹಸವನ್ನು ನೆನೆದಾಗ ಜೋರಾಗಿ ನಗಬೇಕೆಂದೆನಿಸಿದರೂ ತುಟಿಯಂಚಿನಲಿ ಮುಗುಳು ನಗೆಯಂತೂ ತೇಲಿ ಬಂತು.

✲

ಮಂಪರ್ ಬಹುಮಾನ!

- ಬಿಕೆಜಿ

ಇಲ್ಲಿ ಹಾಲಪ್ಪ ಎಂಬ ಮಿನಿಷ್ಟರ್ದ್ದೇ ಗುಲ್ಲು; ಬಾಂಬೆಯಲ್ಲಿ ಕಸಬ್‌ಗೆ ಗಲ್ಲು.

ಈ ಸುದ್ದಿಗಳು ರೆಕ್ಕೆಪುಕ್ಕ ಕಟ್ಟಿಕೊಂಡು ಹಾರಾಡುತ್ತಿರುವಾಗಲೇ ಜೈಲಿನಲ್ಲಿ ಈ ಘಟನೆ ನಡೆದಿತ್ತು. ಸೆಲ್‌ನಲ್ಲಿ ಬರಿಮೈ ಚೆಲ್ಲಿ ಕೂತಿದ್ದ ಬರೀಂಲಾಲಾ ಒಮ್ಮಿಂದೊಮ್ಮೆಗೆ ಕುಳಿತಲ್ಲೇ ಹಾರಿಬಿಟ್ಟ. ಈ ಇಷ್ಯ ಯಾವ ಚಾನೆಲ್‌ನವರಿಗೂ ಗೊತ್ತಾಗಿಲ್ಲ. ಗೊತ್ತಾಗಿದ್ದರೆ ಅದೇ (ಜೈಲ್) ಬ್ರೇಕಿಂಗ್ ನ್ಯೂಸ್ ಆಗಿಬಿಡುತ್ತಿತ್ತೇನೋ. ಸೈಲೆಂಟಾಗಿದ್ದ ಲಾಲಾ ಜಂಪಿಸಿ ಎಲ್ಲರನ್ನೂ ಕಂಪಿಸಿದ್ದು ಯಾಕೆ- ಎನ್ನುವ ಪ್ರಶ್ನೆಗೆ ಉತ್ತರ ಹುಡುಕಲು ತನಿಖೆ ಅಂತ ಅಷ್ಟು ದಿನ ಟೈಮ್‌ಪಾಸ್ ಆಗುತ್ತಿತ್ತೇನೋ. ಅದಿರಲಿ ಬಿಡಿ.

ಹೌದಲ್ವೇ, ಹಾಗಿದ್ರೆ ಲಾಲಾ ಹಾರಿದ್ದು ಯಾಕೆ? ಈ ಎರಡೂ ಸುದ್ದಿಗೂ ಕೆಡಿಸಿಕೊಳ್ಳುವ ತಲೆ ಅವನದ್ದಲ್ಲ. ಇಷ್ಟಕ್ಕೆಲ್ಲ ಕಾರಣ- ಪತ್ರಿಕೆಗಳಲ್ಲಿ ಬಂದ ಆ ಒಂದು ಸುದ್ದಿ. ಇಷ್ಟಕ್ಕೂ ಅದನ್ನು ಹೆಚ್ಚಿನ ಜನ ಓದಲೇ ಇಲ್ಲ.

ಆರೋಪಿಗಳಿಗೆ ಮಂಪರು ಪರೀಕ್ಷೆಯನ್ನು ಕಡ್ಡಾಯಗೊಳಿಸಬಾರದು. ಮಾತನಾಡುವ ಅಥವಾ ಮೌನವಾಗಿರುವ ಹಕ್ಕನ್ನು ಕಸಿಯಬಾರದು. ಆರೋಪಿಯ ಅನುಮತಿ ಪಡೆಯದೆ ಮಂಪರು ಪರೀಕ್ಷೆ ನಡೆಸಬಾರದು ಹೀಗಂತ ಸುಪ್ರೀಂಕೋರ್ಟ್ ತೀರ್ಪು ನೀಡಿತು. ಇದನ್ನು ನೋಡಿಯೇ ಬರೀಂ ಲಾಲಾ ಜಿಗಿದದ್ದು.

ಮಂಪರು ಪರೀಕ್ಷೆಗೆ ಒಳಗಾಗಿ ಬಾಯಿ ಬಿಟ್ಟಿರುವ ಲಾಲಾ ಸೆಲ್‌ನಲ್ಲೇ ಉಬ್ಬಿ ಹಾರಲು ಇದೇ ಕಾರಣ. ಮಂಪರಿನಲ್ಲಿ ತಾನು ಆಡಿದ ಮಾತು, ಹೇಳಿದ ಸತ್ಯಗಳೆಲ್ಲ ಸುಳ್ಳು- ಅದು ಕಾನೂನುಬಾಹಿರ ಎಂದು ಕೋರ್ಟಿನ ಕದ ತಟ್ಟಲು ಲಾಲಾಗೆ ಒಂದು ದಾರಿ ಸಿಕ್ಕಿತು.

ಮಂಪರಿನಲ್ಲಿ ಹೇಳಿದ್ದೆಲ್ಲ ಸತ್ಯ ಎನ್ನುವ ಹಾಗೂ ಇಲ್ಲ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಜಗತ್ತಿನ ಬಹುತೇಕ ಅಪರಾತಪರಾಗಳು ಮಂಪರಿನಲ್ಲೇ ನಡೆಯುವುದು. ಪಾಪ, ಶಿವಮೊಗ್ಗದ ಹೆಣ್ಣುಮಗಳು ನಿದ್ರೆಯ ಮಂಪರಿನಲ್ಲಿದ್ದಾಗಲೇ ಹಾಲಪ್ಪ ಎಂಟ್ರಿ ಆಗಿದ್ದು. ಬೆಳಗ್ಗಿನ ಜಾವ ಹಾಲಪ್ಪ ಸಹ ಕಾಮದ ಮಂಪರಿನಲ್ಲಿದ್ದಿರಲೇಬೇಕು. ನಿತ್ಯಾನಂದನಿಗೆ ಮಂಪರು ಬರಿಸಿಯೇ ಕ್ಯಾಮೆರಾ ಇಟ್ಟದ್ದು. ಮಂಪರಿನಲ್ಲಿ ನಡೆದುಹೋದ ಕೆಲಸಕ್ಕೆ ಮಾಫಿ ಕೊಡಬೇಕು ಎನ್ನುವುದು ಸ್ವಾಮಿಯ ಕೋರಿಕೆ ಇರಬೇಕು.

ಅಷ್ಟೇ ಅಲ್ಲ, ನಮ್ಮ ದೇಶದ ರಾಜಕಾರಣವೂ ಮಂಪರಿನಲ್ಲೇ ನಡೆಯುವುದು. ಅಧಿಕಾರದ ಮಂಪರಿನಲ್ಲಿ ಒಂದು ಪಕ್ಷದ ಜೊತೆ ಮೈತ್ರಿ ಮಾಡಿಕೊಳ್ಳೋದು, ಮಂಪರಿಳಿದ ಮೇಲೆ ಡೈವೋರ್ಸ್ ಕೊಡುವುದು ಮಾಮೂಲಿಬಿಡಿ.

ಮೊನ್ನೆ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲೂ ಮಂಪರು ಪರೀಕ್ಷೆ ನಡೆದಿತ್ತು. ರಾತ್ರಿ ಇಡೀ ಪಕ್ಷದವರು ಸುರಿದ ಹೆಂಡ ಕುಡಿದ ಅಮಾಯಕ ಮತದಾರನಿಗೆ ಮರುದಿನ ಮಂಪರು ಮತದಾನ. ಅಮಲಿಳಿದಾಗ ನಿದ್ದೆಯ ಮಂಪರು. ಯಾರಿಗೆ ಒತ್ತಿದನೋ, ಬಿಟ್ಟೆನೋ... ಉಹೂಂ ನೆನಪಿಗೆ ಬರೊಲ್ಲ.

ಇನ್ನು ಟೀವಿಯಲ್ಲಿ ಅದ್ಯಾರನ್ನೋ ಕರೆಯಿಸಿ, ಮಂಪರಿಗೆ ಇಳಿಸಿ... 'ಈಗ ಹೇಳಿ.. ನಿಮ್ಮ ಹಳೇ ಜನ್ಮದ ಕತೆ' ಎನ್ನೋ ಜನ್ಮಾಂತರ ಮಂಪರು ಕಾರ್ಯಕ್ರಮ ಈಗ ಪಾಪ್ಯುಲರ್!


ಕ್ರಿಕೆಟ್ ಅನ್ನೋ ಅಫೀಮು ತಿಂದು ತೇಲಾಡುತ್ತಿದ್ದವರನ್ನು ಮರಳುಮಾಡಿ ಕೋಟಿಗಟ್ಟಲೆ ಹಣ ಬಹುಮಾನ ದೋಚಿಕೊಳ್ಳೋದನ್ನ 'ಮಂಪರ್ ಬಹುಮಾನ' ಅನ್ನಬಹುದಲ್ಲವೇ?

ಕೊನೇ ಮಂಪರು: ಮುಖ್ಯಮಂತ್ರಿ ಯಡಿಯೂರಪ್ಪ ಎಲ್ಲಾದರೂ ಸಿಕ್ಕರೆ ಕೇಳಿನೋಡಿ- ನಿಮಗೂ ಮಂಪರು ಬರುತ್ತಾ ಅಂತ. ತಕ್ಷಣ ಉತ್ತರಿಸಬಹುದು- ಎಲ್ಲಿ ಈ ರೆಡ್ಡಿ ಬ್ರದರ್ಸ್ ನಿದ್ದೆ ಮಾಡೋಕೇ ಬಿಟ್ರೆ ತಾನೇ ಮಂಪರು!

ಯಾವುದಿಲ್ಲ?

ಪ್ರ: ಕೋತಿಯಲ್ಲಿರುವ ಆದರೆ ನನ್ನಲ್ಲಿಲ್ಲದಿರುವುದು ಯಾವುದು?

ಉ: ಉದ್ದನೆಯ ಬಾಲ



ಉಲೂಕಾ ಪಟ್ಟೇ......

- ಗುರು

ನಂಜುಂಡಿ ಕಲ್ಯಾಣದ ಕಥೆ ಹೇಳಿದೆ ಅಲ್ಲವೇ? ನಮ್ಮ ಸಿ ಟಿ ಡಿ ಯಲ್ಲಿ ಸುಮಾರು ಮೂರುವಾರ ನಮ್ಮನ್ನ ಕೂಡಿಸಿ ನಮಗೆ ತಾಳ್ಮೆಯ ತರಬೇತಿ ನೀಡಿದರು. ತಾಳ್ಮೆ ತರಬೇತಿ ಹೇಗೆ ಅಂದರೆ ಕೆಲಸವಿಲ್ಲದೆ ಸುಮ್ಮನೆ ಕೂತಿರುವ ತರಬೇತಿ- ಇನ್ನೂ ಒಳಗೆ ಪೋಸ್ಟಿಂಗ್ ಮಾಡಿರಲಿಲ್ಲ, ಇಲ್ಲಿ ನಾವು ಮಾಡುವಂತಹ ಕೆಲಸವೂ ಇರಲಿಲ್ಲ, ಅದರಿಂದ ಸುಮ್ಮನೆ ಕೂತಿರಬೇಕು- ಇದು ಯಾರಿಂದಲೂ ಅದೂ ಆಗ ತಾನೇ ಕಾಲೇಜು ಮುಗಿಸಿಬಂದಿರುವ ಮಂಗಗಳ ಹತ್ತಿರ ಆಗದಿರುವ ಕೆಲಸ. ಇದರಿಂದ ಒಂದು ಲಾಭವಂತೂ ಆಯಿತು. ನಮ್ಮ ಜತೆ ಕೆಲಸಕ್ಕೆ ಸೇರಿದವರ ನಿಕಟವಾದ ಪರಿಚಯ ಮತ್ತು ಸ್ನೇಹ ಬೆಳೀತು ಮತ್ತು ಮುಂದೆ ಈ ಸ್ನೇಹ ಮುಂದುವರಿದು ಕಷ್ಟಕಾಲದಲ್ಲಿ ಒಬ್ಬರಿಗೆ ಒಬ್ಬರು ಆಗುವಂತಹ ಕಾರ್ಯವನ್ನೂ ನಮ್ಮ ಅರಿವಿಗೆ ಬಾರದ ಹಾಗೆ ಮೂಡಿಸಿಬಿಟ್ಟಿತು. ಒಟ್ಟಾರೆಯಾಗಿ ಆಯ್ಕೆಯಾದವರೆಲ್ಲರೂ ಒಂದು ಸೇರಿದ ನಂತರ ನಮ್ಮನ್ನು ಕಾರ್ಖಾನೆ ಒಳಗೆ ಕಳಿಸುವ ಏರ್ಪಾಟು ನಡೆಯಿತು. ಆಗಲೇ ಸುಮಾರು ಜನ ಯಾವಯಾವ ಇಲಾಖೆಗಳಿಗೆ ಹೋದರೆ ಮುಂದೆ ಬರುವ ಛಾನ್ಸು ಎಷ್ಟು ವೇಗವಾಗಿದೆ ಅನ್ನುವುದನ್ನು ಅವರ ಹತ್ತಿರದ ಬಂಧುಗಳಿಂದ ಅರಿತಿದ್ದರು ಮತ್ತು ಆಯಾ ಇಲಾಖೆಗಳಿಗೇ ಹೋಗುವ ದಾರಿಯ ವ್ಯವಸ್ಥೆ ಸಹ ಮಾಡಿಕೊಂಡಿದ್ದರು. ನನಗೋ ಯಾರೂ ಒಳಗಿನವರು ತಿಳಿದಿರಲಿಲ್ಲ ಮತ್ತು ಕೆಲಸಕ್ಕೆ ಸೇರೀದೀನಿ ಎಲ್ಲೀಗೆ ಹಾಕಿದರೆ ಅಲ್ಲೀಗೆ ಹೋಗೋದು ಅಂತ ತೆಪ್ಪಗಿದ್ದೆ- ಅಭಾವ ವೈರಾಗ್ಯ ಅಂತಾರೆ ನೋಡಿ ಹಾಗೆ ! ಎಲ್ಲರಿಗೂ ಕಾರ್ಖಾನೆ ಒಳಗೆ ರವಾನಿಸಿದರು. ನಾನೂ ನನ್ನ ಥರಹದ ಮಿಕ್ಕ ಆರೆಂಟು ಜನರಿಗೆ ಪೋಸ್ಟಿಂಗ್ ಆದ ಜಾಗ ಎಂದರೆ ಕಾರ್ಖಾನೆಯ ಪ್ರೊಡಕ್ಷನ್ ಏರಿಯಾಗಳು. ನಾವು ಸ್ಟೋರ್ ಕೀಪರುಗಳು ಎಂದು ಸೇರಿದ್ದು- ಪ್ರೊಡಕ್ಷನ್ ಏರಿಯಾದಲ್ಲಿ ನಮಗೇನು ಕೆಲಸ ಅಂತ ಮೊದಲು ಆಶ್ಚರ್ಯವಾಗಿತ್ತು. ಆದರೆ ಕೆಲಸದ ತಾಣಕ್ಕೆ ಹೋಗಿ ನೋಡಿದಾಗ ಒಂದು ಸಲ ಪಿಚ್ ಅನಿಸಿಬಿಟ್ಟಿತು. ಕಾರಣ ನಮ್ಮನ್ನ ಹಾಕಿದ್ದು ಟೂಲ್‌ಕ್ರಿಬ್ ಎಂದು ಕರೆಯುವ ಜಾಗಕ್ಕೆ. ಕಾರ್ಖಾನೆಯಲ್ಲಿ ನೀವು ಕೆಲಸ ಮಾಡಿರುವವರಾಗಿದ್ದರೆ ನಿಮಗೆ ಟೂಲ್‌ಕ್ರಿಬ್ ಅಂದರೆ ಏನು ಅಂತ ಗೊತ್ತಿರುತ್ತೆ. ಇಲ್ಲವಾದವರಿಗೆ ಹೇಳಬೇಕೂಂದರೆ ಒಂದು ಕೇಜ್ ಅಥವಾ ಒಂದು ಬೋನನ್ನು ನಿಮ್ಮ ಕಣ್ಣೆದುರು ತಂದುಕೊಳ್ಳಿ- ಹತ್ತಡಿ ಬೈ ಹತ್ತಡಿಯ ಬೋನು ಅದರಲ್ಲಿ ಒಂದು ಟಿಕೆಟ್ ಕೌಂಟರ್ ಮಾದರಿಯ ಓಪನಿಂಗು- ಬೋನಿನ ಒಳಹೋಗಲು ಒಂದು ಬಾಗಿಲು. ಇದು ಹೊರಗಡೆಯಿಂದ ಕಾಣುವಂತದ್ದು. ಒಳಗೆ ನಿಮಗೆ ಮೆಷೀನು ನಡೆಸಲು ಬೇಕಾಗುವ ಹಲವಾರು ರೀತಿಯ ಸಲಕರಣೆಗಳು- (ಡ್ರಿಲ್ ಬಿಟ್‌ಗಳು, ಎಂಡ್ ಮಿಲ್ಲುಗಳು, ಹ್ಯಾಮರು, ಪಂಚುಗಳು, ಸ್ಕೇಲುಗಳು, ಫೈಲುಗಳು, ಸೆಂಟರ್ ಬಿಟ್ಟುಗಳು....... ಹೀಗೆ ವೈವಿಧ್ಯಮಯವಾದವು) ಇವುಗಳನ್ನು ರ್‍ಯಾಕಿನಲ್ಲಿ ಜೋಡಿಸಿಟ್ಟು ಬೇಕಾದವರಿಗೆ ನೀಡುವುದು! ಈ ಕೆಲಸವನ್ನು ಮೊದಲು ಅಂದರೆ ನಾವು ಬರುವ ಮೊದಲು ಎಸ್ಸೆಲ್ಸಿ ಫೇಲು ಆಗಿರೋರು ಮಾಡ್ತಾ ಇದ್ದರಂತೆ. ಈ ಸಾಮ್ರಾಜ್ಯಕ್ಕೆ ಬೀಎಸ್ಸೀಗಳು ಯಾಕೆ ಬೇಕಿತ್ತು ಅಂತ ಅನಿಸಿತು. ಆದರೆ

ಪ್ರತಿಯೊಂದರ ಹಿಂದೆಯೂ ಯಾವುದೋ ಒಂದು ಯೋಜನೆ ಇರುತ್ತೆ ಅಂತ ಅಂದುಕೊಂಡೆವು. ನಮ್ಮಲ್ಲಿ ಕೆಲವರು ನಿಜವಾದ ಸ್ಟೋರ್ಸ್ ಕಡೆಯೇ ಹೋಗಿದ್ದರು- ಕೆಲಸ ಕಲಿಯಲು ವಿಪುಲವಾದ ಅವಕಾಶಗಳು ಅವರಿಗೆ ಇತ್ತು. ಟೂಲ್ ಕ್ರಿಬ್‌ಗಳಿಗೆ ಬಂದ ನಾವು ಕೆಲಸ ಕಲಿಯುವ ಅವಕಾಶದಿಂದ ವಂಚಿತರಾದೆವು ಅಂತ ಮೊದಮೊದಲು ಅನಿಸಿದರೂ ನಂತರ ಇಂಥಹ ಕಡೆ ಇದ್ದದ್ದರಿಂದ ನಮಗಾದ ಅನುಕೂಲಗಳನ್ನು ನೆನೆದಾಗ ವಿ ಆರ್ ಬ್ಲೆಸ್ಸಡ್ ಒನ್ಸ್ ಅಂತ ಈಗ ಖುಷಿಯಾಗುತ್ತೆ.

ಬೋನಿನ ಒಳಗೆ ನಾವು ಓಡಾಡಬೇಕಾದರೆ ಜೂನಲ್ಲಿನ ಪ್ರಾಣಿಗಳ ರೀತಿಯಲ್ಲಿ ಕಾಣಿಸುತ್ತೀವಿ ಅಂತ ನಮಗೆ ಅನಿಸುತ್ತಿತ್ತು ಮತ್ತು ಹೊರಗೆ ಕಾರ್ಯ ನಿರ್ವಹಿಸುವ ಆಪರೇಟರುಗಳೂ ನಮ್ಮನ್ನ ಬೋನಿನ ಪ್ರಾಣಿಗಳು ಅಂತ ತಮಾಷೆ ಮಾಡುತ್ತಿದ್ದರು. ಮೊದಲು ಅವರುಗಳ ಮಾತಿಗೆ ಕೋಪ ಬಂದರೂ ನಂತರ ನಿಮ್ಮಿಂದ ನಮ್ಮನ್ನು ರಕ್ಷಿಸಲು ನಮ್ಮನ್ನ ಬೋನಿನೊಳಗೆ ಸೇರಿಸಿದಾರೆ, ಹೊರಗಡೆ ಇರುವ ನೀವು ಕ್ರೂರಿಗಳು ಎಂದು ತಮಾಷೆಯಾಗಿಯೇ ಹೇಳುತ್ತಿದ್ದೆ.

ಇನ್ನು ನಿಮಗೆ ಈ ಕೇಜು ಎಲ್ಲಿರುತ್ತೆ ಅಂತ ಹೇಳಬೇಕು. ನಮ್ಮ ಕೆಎಸ್‌ಸಿಎ ಮೈದಾನವನ್ನು ನೆನಸಿಕೊಳ್ಳಿ. ಅದರ ಸುತ್ತಲೂ ಎತ್ತರದ ಕಲ್ಲಿನ ಕಾಂಪೌಂಡು ಕಲ್ಪಿಸಿಕೊಳ್ಳಿ, ಅದರ ಮೇಲೆ ಜಿಂಕ್ ಷೀಟಿನ ಚಾವಣಿ- ಇದನ್ನೂ ಕಲ್ಪಿಸಿಕೊಳ್ಳಿ. ಅದರಡಿಯ ಜಾಗಕ್ಕೆ ಬನ್ನಿ- ಅಲ್ಲಿ ಹಲವಾರು ವಿವಿಧ ರೀತಿಯ ಮೆಷೀನುಗಳು ದೈತ್ಯಾಕಾರದವು- ಇದರಲ್ಲಿ ಡ್ರಿಲ್ಲಿಂಗು, ಮಿಲ್ಲಿಂಗು, ಪ್ಲೇನಿಂಗು, ಬೋರಿಂಗು.... ಈ ಕೆಲಸಗಳನ್ನು ಮಾಡುವಂತಹವು ಮತ್ತು ಪುಟ್ಟಪುಟ್ಟ ಯಂತ್ರಗಳೂ ಸಹಾ ಎಲ್ಲೆಡೆ ಹರಡಿ ಚಾಚಿಕೊಂಡಿರುತ್ತವೆ. ಒಂದು ಭಾಗದಲ್ಲಿ ಶೌಚಾಲಯ, ಅದರ ಪಕ್ಕ ಕಬ್ಬಿಣದ ಶೀಟುಗಳನ್ನು ಪೇರಿಸಿರುವ ಸ್ಥಳ.... ಇವೆಲ್ಲವೂ ಸೇರಿದರೆ ಅದಕ್ಕೆ ಮೆಷೀನು ಶಾಪು ಎಂಬ ಹೆಸರು. ಇದರ ಮಧ್ಯದಲ್ಲಿ ನನ್ನ ಹತ್ತಡಿ ಹತ್ತಡಿಯ ಬೋನು! ಈ ಮೆಷೀನುಗಳಲ್ಲಿ ಕೆಲವು ಭಾರತದವು ಹಲವು ಹೊರದೇಶದವು- ಎಲ್ಲವೂ ಕಾರ್ಖಾನೆ ಶುರುವಾದಾಗ ತಂದವು. ಸುಮಾರು ಮೆಷೀನುಗಳು ಎಚ್‌ಎಮ್‌ಟಿ ಕಂಪನಿಯವು- ಮೂವತ್ತು ನಲವತ್ತು ಅಡಿ ಉದ್ದದವು. ಮೂವತ್ತು ನಲವತ್ತು ವರ್ಷಗಳಾದರೂ ಒಮ್ಮೆಯೂ ರಿಪೇರಿಗೇ ಇವು ಬರಲಿಲ್ಲ! ಈ ರೀತಿ ರಿಪೇರಿಗೆ ಬರದೇ ಇರುವ ಮೆಷೀನುಗಳನ್ನು ತಯಾರಿಸಿದ್ದರಿಂದಲೇ ಎಚ್ ಎಮ್ ಟಿ ಗತಿ ಹಾಗಾಗಿದ್ದು ಅಂತ ನಾನು ಸುಮಾರು ಸಲ ನನ್ನ ಕಿರಿಯ ಗೆಳೆಯರಿಗೆ ಹೇಳಿದ್ದುಂಟು. ಜಪಾನಿನ ಮೆಷೀನುಗಳು ಆಗಾಗ್ಗೆ ರಿಪೇರಿಗೆ ಬರುತ್ತೆ, ಚೈನಾದವು ಹಾಳಾಗುತ್ತ್ವೆ- ಆದರೆ ಭಾರತದ್ದು ಹೀಗ್ಯಾಕೆ ಕೆಲಸ ಮಾಡುವಂತೆ ತಯಾರಾಗಬೇಕು ಅಂತ ನನ್ನ ಪ್ರಶ್ನೆ!

ಈ ಬೋನಿನಲ್ಲಿ ನನಗೆ ಜತೆಗಾರ ವಾರಿಯರ್ ಎನ್ನುವ ಕೇರಳದ ಮಾಜಿ ಸಿಪಾಯಿ. ಸುಮಾರು ವರ್ಷ ಸೈನ್ಯದಲ್ಲಿ ಇದ್ದು ಬಂದಾತ. ಸೈನ್ಯದಲ್ಲಿ ಇದ್ದುದರಿಂದ ಅವನಿಗೆ ಸರಿ ಸುಮಾರು ಎಲ್ಲಾ ಭಾಷೆಗಳು ಅರ್ಧ ಅರ್ಧ ಬರುತ್ತಿತ್ತು- ಯಾವುದೇ ಭಾಷೆಯೂ ಸಂಪೂರ್ಣ ಬರದು. ಇವನ ಹತ್ತಿರ ಮಾತನಾಡುತ್ತಿದ್ದರೆ ಇಡೀ ಭಾರತದವರ ಹತ್ತಿರ ಒಟ್ಟಿಗೇ ಮಾತನಾಡುತ್ತಿದ್ದೇವೆ ಅನಿಸುತ್ತಿತ್ತು- ಆದರೆ ಯಾವುದೂ ಸರಿಯಾಗಿ ಅರ್ಥವೇ

ಆಗುತ್ತಿರಲಿಲ್ಲ! ಎರಡು ದಿವಸ ಇವನ ಜತೆ ಕೆಲಸ ಮಾಡುವ ಹೊತ್ತಿಗೆ ಜೀವಮಾನ ಪೂರ್ತಿ ಹೀಗೇ ಇವನ ಜತೆ ಕಳೆದುಬಿಡುವ, ಇವನ ರೀತಿಯ ಭಾಷೆಯನ್ನೇ ಇಡೀ ಜೀವಮಾನ ಪೂರ್ತಿ ಆಡುವ ಭಯ ಶುರುವಾಗಿತ್ತು. ಅದನ್ನು ಹೇಗೆ ಓವರ್‌ಕಮ್ ಮಾಡಿದೆ ಎಂದು ಮುಂದೆ ವಿವರಿಸುತ್ತೇನೆ. ಈಗ ನನ್ನ ಮೊದಲ ದಿವಸಗಳ ಅನುಭವಗಳನ್ನು ಹಂಚಿಕೊಳ್ಳಬೇಕು. ಈ ಅನುಭವವನ್ನು ಈಗಾಗಲೇ ನಿಮ್ಮೊಂದಿಗೆ ಹೇಳಿಕೊಂಡಿದ್ದೀನಿ ಅನ್ನುವ ಭಾವನೆ ನನಗೆ (ಈ ಭಾವನೆ ಬರಲು ಕಾರಣ ಮೊನ್ನೆ ನನ್ನ ಹೊಸಾ ಮಿತ್ರರೊಬ್ಬರು ಇಲ್ಲಿನ ಒಂದು ಮಾತನ್ನು ನೆನೆಸಿಕೊಂಡರು!), ಆದರೂ - ಫಾರ್ ದಿ ನ್ಯೂ ಕಮರ್ಸ್- ಮತ್ತೊಮ್ಮೆ ಹೇಳಲಾ?

ವಾರಿಯರ್ ಮಿಲಿಟರಿಯವನು ಎಂದು ಹೇಳಿದೆ. ಮಿಲಿಟರಿಯವರಿಗೆ ತಕ್ಕಹಾಗೆ ಈತನ ನಡಾವಳಿ. ಸಿಪಾಯಿಗಳು ಕಾಫಿ ಕುಡಿಯುವ ರೀತಿಯ ಬಟ್ಟಲುಗಳನ್ನು (ಇವಕ್ಕೆ ಮಗ್ ಎನ್ನುತ್ತಾರೆ) ಸ್ಟೀಲ್ ಹಾಳೆಯಲ್ಲಿ ಕಾರ್ಮಿಕರು ಮಾಡಿಸಿ ಇಟ್ಟು ಕೊಂಡಿದ್ದರು. ಇವನೇ ಜುಲುಮೆಮಾಡಿ ಈ ರೀತಿಯ ಲೋಟಗಳನ್ನು ಮಾಡಿಸಿಕೊಟ್ಟನೇನೋ ಅಂತ ನನಗೆ ಗುಮಾನಿ. ಪ್ರತಿದಿವಸ ಬೆಳಿಗ್ಗೆ ಸೆಕ್ಷನ್ನಿಗೆ ಬರುತ್ತಿದ್ದ ಹಾಗೆಯೇ ಸುಮಾರು ನೂರಾ ಐವತ್ತು ಜನ ನಮ್ಮ ಕಿಟಕಿ ಮುಂದೆ ನೆರೆಯುತ್ತಿದ್ದರು. ವಾರಿಯರ್ ಅವನದೇ ಆದ ಆರ್ಭಟದಲ್ಲಿ ಎಲ್ಲರಿಗೂ ಈ ಮಗ್ಗುಗಳನ್ನು ವಿತರಿಸುತ್ತಿದ್ದ- ಅವರುಗಳು ಕಾಫಿ ಕುಡಿಯಲು. ಕೆಲಸ ಮುಗಿಯುವ ವೇಳೆಗೆ ಇವನು ಪ್ರತಿಯೊಬ್ಬರ ಬಳಿ ಹೋಗಿ ಅವುಗಳನ್ನು ವಾಪಸ್ಸು ತಂದು ಒಂದು ಮರದ ಪೆಟ್ಟಿಗೆಯಲ್ಲಿ ಇರಿಸಿ ಅದಕ್ಕೆ ಬೀಗ ಜಡಿಯುತ್ತಿದ್ದ. ಯಾರಾದರೂ ಮಗ್ಗು ವಾಪಸ್ಸು ಕೊಟ್ಟಿಲ್ಲ ಎಂದರೆ ಇವನಿಗೆ ರಾತ್ರಿ ನಿದ್ದೆ ಬರುತ್ತಿರಲಿಲ್ಲ. ಮಾರನೇ ದಿವಸ ಅಂಥಹವರ ಬಳಿ ಸಾಗಿ ಯಾಕೆ ಹಿಂದಿನ ದಿವಸ ಮಗ್ಗು ಕೊಟ್ಟಿಲ್ಲ ಇನ್ನು ಮುಂದೆ ತಾನು ಅದನ್ನು ಇಟ್ಟು ಕೊಳ್ಳುವುದಿಲ್ಲ ಎಂದು ಹೆದರಿಸುತ್ತಿದ್ದ. ನನಗೆ ಇದು ಒಂದು ರೀತಿ ವಿಚಿತ್ರ ಎನಿಸುತ್ತಿತ್ತು- ಇವನಿಗೆ ಯಾಕೆ ಈ ಪಂಚಾಯಿತಿ ಎಂದು. ಆವಾಗವಾಗ ಮಗ್ಗುಗಳಿಗೋಸ್ಕರ ಸಣ್ಣ ಪುಟ್ಟ ಜಗಳಗಳೂ ಸಹ ಆಗುತ್ತಿತ್ತು. ಯಾರದ್ದೋ ಮಗ್ಗು ಯಾರೋ ತಗೊಂಡರು ಎಂದೋ ನನ್ನ ಮಗ್ಗು ಕಳೆದಿದೆ ಎಂದೋ ಈ ರೀತಿ....

ಸುಮ್ಮನೆ ಈ ಜವಾಬ್ದಾರಿ ಹೊತ್ತುಕೊಂಡು ಹಿಂಸೆ ಪಡ್ತಾ ಇದಾನೆ ಬಕರಾ ಅಂತ ಅನಿಸುತ್ತಿತ್ತು. ಇವನಿಗೆ ಈ ಮಗ್ಗುಗಳನ್ನು ಕಾಯುವ ಕೆಲಸ ಕೊಟ್ಟು ಮಿಕ್ಕವರು ಇವನನ್ನು ಎಕ್ಸ್‌ಪ್ಲಾಯ್ಟ್ ಮಾಡುತ್ತಿದ್ದಾರೆ ಅನಿಸುತ್ತಿತ್ತು. ಇದರಿಂದ ವಾರಿಯರ್‌ಗೆ ಸಿಗುತ್ತಿದ್ದ ಸಂತೋಷ ಎಂಥಹುದು ಎನ್ನುವುದು ನನಗೆ ತಿಳಿದಿರಲಿಲ್ಲ. ಮಿಲಿಟರಿಯಲ್ಲಿ ತುಂಬಾ ಕೆಳ ಹಂತದಲ್ಲಿದ್ದು ಬಂದವನು ಅಂತ ಕಾಣುತ್ತೆ- ಮಗ್ಗು ಕಾಯುವ ಕೆಲಸ ಅವನಿಗೆ ಒಂದು ರೀತಿ ರಿಲೀಫು ಒದಗಿಸುತ್ತಿತ್ತು ಅಂತ ನಾನೇ ಅರ್ಥಮಾಡಿಕೊಂಡಿದ್ದೆ. ಒಂದೆರೆಡು ಸಲ ಈ ಜವಾಬ್ದಾರಿ ಯಾಕೆ ಅಂತ ಕೇಳಿದ್ದೆ. ಉನಕು ತೆರಿಯಾದಿ ಚುಪ್ ರಹೋ ಅಂದಿದ್ದ!

ಇದೇ ಸಮಯದಲ್ಲಿ ವಾರಿಯರ್ ತುಂಬಾ ಅಪರೂಪಕ್ಕೆ ಒಂದು ವಾರ ಕೆಲಸಕ್ಕೆ ರಜಾ ಹಾಕಿದ. ನನಗೆ ಒಳ್ಳೇ ಸಮಯ ಸಿಕ್ಕಿದೆ ಅನಿಸಿತು. ಬೆಳಿಗ್ಗೆ ಬೆಳಿಗ್ಗೆ ಎಲ್ಲರೂ ಬಂದು ಮಗ್ಗುಗಳಿಗೆ ಕ್ಯೂ ನಿಂತರು. ನನ್ನ ಕೌಂಟರಿನ ಎದುರು ಪ್ರತಿದಿವಸದ ಹಾಗೆಯೇ ಜನಜಂಗುಳಿ- ಮಗ್ಗು ಪಡೆಯಲು. ತಮಾಷೆ ಎಂದರೆ ಇವು ಯಾವುದೂ ಕಾರ್ಖಾನೆಯ ಉತ್ಪಾದನೆಗೆ ಸಂಬಂಧಪಟ್ಟವಲ್ಲ. ಪ್ರತಿದಿವಸ ಒಂದೆರೆಡು ಗಂಟೆ ಇದಕ್ಕಾಗಿ ವೇಸ್ಟ್ ಆಗ್ತಾ ಇದೆ ಅನ್ನಿಸಿತ್ತು.

ವಾರಿಯರ್ ಇಟ್ಟಿದ್ದ ಮರದ ಪೆಟ್ಟಿಗೆಯ ಬೀಗ ತೆರೆದು ಬಾಗಿಲು ಹಾರುಹೊಡೆದೆ. ಪೆಟ್ಟಿಗೆ ತೆಗೆಮಕೊಂಡು ಬೋನಿನಿಂದ ಆಚೆ ಬಂದೆ. ನೋಡಿ ನಿಮ್ಮ ನಿಮ್ಮ ಮಗ್ಗು ಯಾವುದೋ ನೋಡಿ ತೆಗೆದುಕೊಂಡು ಹೋಗಿ, ನಾಳೆಯಿಂದ ನೀವೇ ಇದನ್ನ ಇಟ್ಟುಕ್ಕೊಳ್ಳಬೇಕು ನಾನು ಇದನ್ನ ವಾಪಸ್ಸು ತೆಗೆದುಕೊಳ್ಳೋದಿಲ್ಲ..... ಅಂದೆ ! ಕಾರ್ಮಿಕರು ಮೊದಲಿಗೆ ಒಂದು ಕ್ಷಣ ಅಪ್ರತಿಭರಾದರು. ಆದರೆ ಕಾಫಿ ಕುಡಿಯಲು ಲೋಟ ಇಲ್ಲ, ದೂಸರಾ ಮಾತಿಲ್ಲದೇ ಲೋಟಗಳನ್ನು (ಮಗ್ಗುಗಳನ್ನು) ತೆಗೆದುಕೊಂಡರು. ಸ್ವಾತಂತ್ರ ಸಿಕ್ಕಿದ ಹಾಗೆ ಲೋಟಗಳನ್ನು ಮೇಲೆತ್ತಿ ಹಿಡಿದು ಬೋನಿನ ಸುತ್ತಲೂ ಕರಗಿದರು.

ಕೆಲಸ ಮುಗಿದಾಗ ಮಗ್ಗುಗಳನ್ನು ವಾಪಸ್ಸು ಮಾಡಲು ಕೆಲವರು ಬಂದರು. ಬೇಡ ತಗೊಳ್ಳೋದಿಲ್ಲಾ ಅಂದೆ. ಅದರ ಮಾರನೇ ದಿವಸ ಯಾರೂ ಮಗ್ಗು ಹುಡುಕಿ ಬರಲಿಲ್ಲ. ಕೆಸಕ್ಕೆ ಸೇರಿದ ಮೊದಲನೇ ಸಲ ಭಾರೀ ಹಾಯ್ ಅನಿಸಿತು. ಎರಡನೇ ದಿವಸ ಮೂರನೇ ದಿವಸ ಇದು ರಿಪೀಟು ಆಗಿ ಮಿಕ್ಕ ಮೂರು ದಿವಸ ಈ ಹೊಸಾ ಸಿಸ್ಟಂಗೆ ಹೊಂದಿಕೊಂಡುಬಿಟ್ಟಿದ್ದೆ. ವಾರಿಯರ್ ಆರು ದಿವಸ ರಜಾ ಹಾಕಿದ್ದ. ನಾಲ್ಕು ದಿವಸದಲ್ಲಿ ಈ ಮಗ್ ಮೇನಿಯಾದಿಂದ ಕೆಲಸಗಾರರನ್ನು ಆಚೆ ದೂಡಿಬಿಟ್ಟೆ! ಎರಡು ದಿವಸ ಬೋನಸ್ಸೂ ಅನುಭವಿಸಿದೆ.

ಏಳನೇ ದಿವಸ ವಾರಿಯರ್ ಕೆಲಸಕ್ಕೆ ಬಂದ. ಬಾಗಿಲು ತೆಗೀತಾನೆ- ಒಬ್ಬನೇ ಒಬ್ಬ ಕೆಲಸಗಾರನೂ ಇವನ ಹತ್ತಿರ ಮಗ್ಗು ಬೇಡಲು ಬರಲಿಲ್ಲ. ಇವನಿಗೆ ಒಂದು ರೀತಿಯ ಶಾಕ್ ಆಗಿಹೋಯಿತು. ಮರದ ಪೆಟ್ಟಿಗೆ ಬಾಗಿಲು ತೆರೆದ. ಅಲ್ಲಿದ್ದ ಮಗ್ಗುಗಳು ಖಾಲಿಯಾಗಿ ಬಿಕೋ ಎನ್ನುತ್ತಿವೆ. ಕಣ್ಣು ಬಾಯಿ ಬಿಟ್ಟುಕೊಂಡು ಇದೆಲ್ಲಾ ಎನ್ನಾ ಆಚಿ? ಅಂತ ನನ್ನನ್ನ ಕೇಳಿದ. ಎಲ್ಲರಿಗೂ ಹಂಚಿಬಿಟ್ಟೆ.... ಇನ್ನು ಮೇಲೆ ನೀನೂ ನಿರಾಳ, ನಾನೂ ನಿರಾಳಾ.... ಅಂದೆ. ಅವನಿಗೆ ನಿರಾಳಾ ಅಂದರೆ ಏನು ಅಂತ ಅರ್ಥ ಆಗಲಿಲ್ಲ!

ಯಾವುದಾದರೂ ದೇಶದ ಮಹಾರಾಜ ಅವನ ರಾಜ್ಯ ಕಳಕೊಂಡಾಗ ಯಾವರೀತಿ ಅವನ ಮುಖ ಇತ್ತು ಅಂತ ನಾನು ಅದುವರೆಗೂ ನೋಡಿರಲಿಲ್ಲ. ಆದರೆ ಈಗ ವಾರಿಯರ್ ಮುಖ ನೋಡಿದಾಗ ಮಹಾರಾಜನ ಮುಖ ರಾಜ್ಯ ಕಳಕೊಂಡಾಗ ಹೀಗೇ ಇರುತ್ತಿತ್ತು ಅಂತ ಹೇಳಬಹುದಾಗಿತ್ತು! ವಾರಿಯರ್ ಹತ್ತು ನಿಮಿಷ ಸುಮ್ಮನೇ ಕೂತ. ಕೋಪ ಶಮನವಾಯಿತೋ ಇಲ್ಲವೋ ತಿಳೀದು- ಹತ್ತು ನಿಮಿಷದ ನಂತರ ತಲೆ ಎತ್ತಿದ. ಉಲ್ಲೂಕ್ಕಾ ಪಟ್ಟಾ ಕ್ಯಾ ಹಾಲ್ ಬನಾದಿಯಾ ರೇ..... ಅಂದ. ಅವನ ಕಣ್ಣಿನಲ್ಲಿ ನೀರು ಮಡುಗಟ್ಟಿ ನಿಂತಿತ್ತು.

ಉಲ್ಲೂ ಕಾ ಪಟ್ಟಾ ಅಂದರೆ ಏನೂಂತ ಅವತ್ತೂ ನನಗೆ ಗೊತ್ತಿರಲಿಲ್ಲ ಇವತ್ತೂ ಗೊತ್ತಿಲ್ಲಾ.ಆದರೆ ಒಬ್ಬ ಹಿರಿಯ ಯೋಧನಿಗೆ ಮನಸ್ಸಿಗೆ ಹರ್ಟ್ ಮಾಡೀದೀನಿ ಅಂತ ಅವತ್ತು ಅನಿಸಿತ್ತು. ಆದರೆ ದಿನಗಳು ಕಳೆದ ಹಾಗೆ ಮಗ್ಗುಗಳಿಗೋಸ್ಕರ ಆಗುತ್ತಿದ್ದ ಸಣ್ಣ ಪುಟ್ಟ ಜಗಳಗಳನ್ನು ನೆನೆಸಿಕೊಂಡರೆ ಅವತ್ತು ನಾನು ಮಾಡಿದ್ದು ಸರಿ ಅನಿಸುತ್ತೆ ಮತ್ತು ನಗೂ ಸಹ ಬರುತ್ತೆ. ಅಂದಹಾಗೇ ಉಲ್ಲೂ ಕಾ ಪಟ್ಟಾ ಅಂದರೇನು? ಈಗ ವಾರಿಯರ್ ಇಲ್ಲ ಆದರೆ ಅವನ ಮಧುರ ನೆನಪುಗಳು ಇನ್ನೂ ಇವೆ !

❋

ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

- ದಂನಆ

- ದೇವರು ಇದ್ದಾನೆಯೆ?
  1. ಇಲ್ಲ 2. ಹೌದು 3. ದೇವರಿಗೇ ಗೊತ್ತು
- ಆರೋಗ್ಯ ಎಂದರೆ ತಿನ್ನದೇ ಇರೋದಲ್ಲ, ತಿಂದು ಜೀರ್ಣಿಸಿಕೊಳ್ಳೋದು.
- India is Rahul Gandhi's family inheritance.
- 'ಮಾನವ ಜೀನೊಮಾ *(genoma)* ದೊಡ್ಡದು, ಹಾಳು ಮಾಡಬೇಡಿರಿ ಹುಚ್ಚಪ್ಪಗಳಿರಾ' ಎಂಬ ಹಾಡೊಂದು ಮುಂದೊಂದು ದಿನ ಕೇಳಿಸತೊಡಗಬಹುದು.
- ಬಾಲಕಿಯರದ್ದೇ ಮೇಲುಗೈ ಎಂದು ಪದೇ ಪದೇ ಕೇಳಿಬರುತ್ತಿರುವುದರಿಂದ ಅದನ್ನು ಫೀಮೇಲುಗೈ ಎಂದು ಬಣ್ಣಿಸಿದರೆ ಹೇಗೆ?

ಮೆಲುಕು ಹಾಕುವಂತಹ ಮಾತುಗಳ ಗುಚ್ಛ

- We search for answers but we seek meaning.
- ಡಿ ಎಂ ಕೆ ಎಂದರೆ ಡೆಲ್ಲಿ ಮನಿ ಫಾರ್ ಕರುಣಾನಿಧಿ ಎನ್ನುವುದಾದರೆ ಎಐಡಿಎಂಕೆ ಎಂದರೆ ಏನಿರಬಹುದು?
- ಸಮಯ ಬಂಗಾರವಿದ್ದಂತೆ. ಆದರೆ ಬಂಗಾರದಿಂದ ಸಮಯವನ್ನು ಕೊಳ್ಳಲು ಆಗುವುದಿಲ್ಲ.
- Beauty is makeup deep.
- ಯಂತ್ರಗಳು ಯೋಚಿಸುತ್ತವೆಯೆ ಎಂಬುದು ನಿಜವಾದ ಸಮಸ್ಯೆ ಅಲ್ಲ. ಮನುಷ್ಯನು ಯೋಚಿಸುತ್ತಾನೆಯೆ ಎಂಬುದು ನಿಜವಾದ ಸಮಸ್ಯೆ.
- ನೇಣು ಹಾಕಿಸಿಕೊಂಡೇ ಸಾಯಬೇಕು ಎಂದಿರುವವನನ್ನು ಮುಳುಗಿಸಿ ಕೊಲ್ಲಲು ಆಗುವುದಿಲ್ಲ.
- Con banega crorepati.
- ನಂಬಿಕೆ ಎನ್ನುವುದು ಟೂತ್ ಬ್ರಷ್ ಇದ್ದಂತೆ. ಪ್ರತಿಯೊಬ್ಬನ ಬಳಿಯೂ ಒಂದೊಂದು ಇದ್ದು ಅದನ್ನು ನಿತ್ಯ ಬಳಸಬೇಕು. ಆದರೆ ಇನ್ನೊಬ್ಬರದ್ದನ್ನು ಬಳಸಬಾರದು.
- ನಗು ಎಂಬುದು ಒಂದು ದಿಢೀರ್ ವೆಕೇಷನ್.
- Growing older is mandatory but growing up is optional.
- ಯಾವುದೇ ಶ್ರೀಶ್ರೀಗಳನ್ನು ಮುಗಿಸಬೇಕಾದರೆ ಈಗ ಬಂದೂಕಿನ ಅವಶ್ಯಕತೆ ಇಲ್ಲ. ಬೇಕಾಗಿರುವುದು ಒಂದು spy ಕ್ಯಾಮೆರಾ ಎಂದು ಅವರ ಖಾಸಾ ಶಿಷ್ಯರೇ ಹೇಳುತ್ತಿದ್ದಾರಂತೆ.
- ನನ್ನಲ್ಲಿ ನಂಬಿಕೆ ಇದೆಯೆ ಎಂದು ನೀವು ಯಾರನ್ನಾದರೂ ಕೇಳಿದಾಗಲೇ ನಿಮಗೆ ಅವರ ನಂಬಿಕೆ ಬಗ್ಗೆ ಅನುಮಾನ ಇದೆ ಎಂದು ಸಾಬೀತಾಗುತ್ತದೆ.

ಕಂಗಾಲು ಮಾಡಿದ ಕೇರೆ ಹಾವು!

- ಡಾ|| ಟಿ.ಎಸ್. ರಮಾನಂದ್

[ವನ್ಯ ಜೀವಿಗಳ ಪಶುವೈದ್ಯರಾದ ಡಾ|| ಟಿ.ಎಸ್. ರಮಾನಂದ್ ಅವರ ಅನುಭವಗಳನ್ನು ದಾಖಲಿಸಿರುವ ಪುಸ್ತಕ "ವೈದ್ಯರ ಶಿಕಾರಿ"ಯಿಂದ ಆಯ್ದ ಒಂದು ಪ್ರಸಂಗ]

ವನ್ಯಜೀವಿ ಪಶುವೈದ್ಯ ಯಾವಾಗಲೂ ಉದ್ವೇಗ, ಆತಂಕ, ಪ್ರಾಣಭಯಗಳ ಮಧ್ಯೆಯೇ ಕೆಲಸ ನಿರ್ವಹಿಸಬೇಕಾಗುತ್ತದೆ. ಕೆಲವೊಮ್ಮೆ ಅನಿರೀಕ್ಷಿತವಾಗಿ ತಮಾಷೆಯ ಪ್ರಸಂಗಗಳು ಎದುರಾಗುತ್ತವೆ. ಬೆಟ್ಟದಂತೆ ಬಂದ ಸಮಸ್ಯೆ ಮಂಜಿನಂತೆ ಕರಗಿಹೋಗುವ ಪ್ರಸಂಗಗಳು ಇಲ್ಲದಿಲ್ಲ. ಅನೇಕ ಸಂದರ್ಭಗಳಲ್ಲಿ ನಿಸ್ಸಹಾಯಕ, ನಿರುಪಾಯ ಪ್ರಾಣಿಗಳು ಗೊಂದಲ, ಗಾಬರಿ, ಭೀತಿಗಳನ್ನುಂಟು ಮಾಡುತ್ತವೆ.

ಉತ್ತರ ಕನ್ನಡ ಜಿಲ್ಲೆ ಶಿರಸಿಯಲ್ಲಿರುವ ಮೃಗಾಲಯದ ಕಡವೆಗಳಲ್ಲಿ ಸಾಂಕ್ರಾಮಿಕ ರೋಗವೊಂದು ನನ್ನ ಶಿರಸಿ ಭೇಟಿಗೆ ಕಾರಣ ಆಯಿತು. ನಾನು ಶಿವಮೊಗ್ಗದಿಂದ ಶಿರಸಿಗೆ ಪ್ರಯಾಣ ಹೊರಟ ಸಮಯಕ್ಕೆ ಸರಿಯಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ವನ್ಯಜೀವಿ ಪಶುವೈದ್ಯ ಅಧಿಕಾರಿ ಡಾ|| ಬಸವರಾಜಪ್ಪನವರು ಸ್ವಂತ ಕೆಲಸದ ನಿಮಿತ್ತ ಶಿವಮೊಗ್ಗಕ್ಕೆ ಆಗಮಿಸಿದರು.

ನನ್ನ ಕೋರಿಕೆಯ ಮೇರೆಗೆ ಅವರೂ ಶಿರಸಿಗೆ ಹೊರಟರು. ಶಿರಸಿ ಅರಣ್ಯ ವಿಭಾಗದವರು ವಾಹನವನ್ನು ನಮ್ಮ ಪ್ರಯಾಣಕ್ಕೆ ಒದಗಿಸಿದ್ದರು. ನಾವಿಬ್ಬರೂ ಶಿರಸಿ ಮೃಗಾಲಯಕ್ಕೆ ಭೇಟಿ ನೀಡಿ ರೋಗ ತಪಾಸಣೆ ಮಾಡಿ ಸೂಕ್ತ ಚಿಕಿತ್ಸೆ ನೀಡಿ ಕೈಗೊಳ್ಳಬಹುದಾದ ಮುಂದಿನ ಕ್ರಮದ ಬಗ್ಗೆ ಚರ್ಚಿಸಿ ವಾಪಸು ತೆರಳಲು ಅನುವಾದೆವು. ವಲಯ ಅರಣ್ಯಾಧಿಕಾರಿಗಳು, ಮೃಗಾಲಯದ ಪರಿವೀಕ್ಷಣೆಗೆ ಒಂದು ಸುತ್ತು ನಮ್ಮನ್ನು ಕರೆದೊಯ್ದರು. ಹಾವಿನ ಗುಂಡಿ ಒಳಗೆ ಇಣುಕಿ ನೋಡಿದರೆ ಲೆಕ್ಕವಿಲ್ಲದಷ್ಟು ಕೇರೆಹಾವು, ನಾಗರಹಾವುಗಳನ್ನು ಬಿಟ್ಟಿದ್ದಾರೆ. ಕೂಡಲೇ ಶಿವಮೊಗ್ಗ ಮೃಗಾಲಯದಲ್ಲಿ ಕಾಳಿಂಗ ಸರ್ಪಕ್ಕೆ ಸುಮಾರು ಒಂದು ತಿಂಗಳಿನಿಂದ ಕೇರೆ ಹಾವನ್ನು ಆಹಾರವಾಗಿ ಒದಗಿಸಲು ಸಾಧ್ಯವಾಗದೇ ಹೋದದ್ದು ನೆನಪಿಗೆ ಬಂದಿತು. ಮೃಗಾಲಯದ ಮೇಲ್ವಿಚಾರಕರಿಗೆ ಒಂದು ಕೇರೆಹಾವನ್ನು ಚೀಲದಲ್ಲಿ ತುಂಬಿ ಜೀಪಿನಲ್ಲಿಡಲು ಸೂಚಿಸಿದೆ. ಆತ ಕೇರೆಹಾವನ್ನು ಗೋಣಿಚೀಲದಲ್ಲಿ ಸೇರಿಸಿ ಬಿಗಿಯಲು ಸೂಕ್ತ ದಾರ ದೊರೆಯದೇ ತೆಂಗಿನ ಹುರಿಯಲ್ಲಿ ಕಟ್ಟಿ ನನ್ನ ಜೀಪಿಗೆ ರವಾನಿಸಿದ.

ಶಿರಸಿಯಿಂದ ಹೊರಟ ನಾವು ಸಿದ್ದಾಪುರ ದಾಟಿ ತಾಳಗುಪ್ಪ ಸಮೀಪ ಬಂದಿದ್ದೆವು. ಡ್ರೈವರ್ ಮತ್ತು ಡಾ|| ಬಸವರಾಜಪ್ಪನವರ ಮಧ್ಯೆ ನಾನು ಕುಳಿತಿದ್ದೆ. ಹರಟೆ ಹೊಡೆಯುತ್ತಾ ಪ್ರಯಾಣದ ಏಕತಾನತೆಯನ್ನು ಕಡಿಮೆ ಮಾಡುತ್ತಿದ್ದೆವು. ಚಾಲಕನ ಹಿಂಬದಿಯ ಒರಗು ಸೀಟಿಗೆ ನನ್ನ ಕೈಚಾಚಿ ಕುಳಿತಿದ್ದೆ. ಜೀಪ್ ವೇಗವಾಗಿ ಓಡುತ್ತಿತ್ತು. ಇದ್ದಕ್ಕಿದ್ದಂತೆ ನನ್ನ ತೋಳಿಗೆ

ತಣ್ಣನೆಯ ವಸ್ತುವೊಂದು ತಗುಲಿದಂತಾಯಿತು. ಒಂದಿರುಗಿ ನೋಡಿದರೆ ನಮ್ಮ ಸಹ ಪ್ರಯಾಣಿಕ ಕೇರೆಹಾವು ಚೀಲದ ಬಂಧನದಿಂದ ಬಿಡುಗಡೆ ಹೊಂದಿ ಒರಗು ಸೀಟಿನ ಮೇಲೆ ನಿಧಾನವಾಗಿ ಹತ್ತುತ್ತಿದೆ!!

ಹಾವಿನ ಸ್ಪರ್ಶಕ್ಕೆ ಭೀತಿಯನ್ನುಂಟುಮಾಡುವ ವಿಚಿತ್ರ ಗುಣವಿದೆ. ನುಣುಪಾದ ತಣ್ಣನೆಯ ದೇಹ ಸದ್ದಿಲ್ಲದೆ ನನ್ನ ತೋಳಿನ ಮೇಲೆ ಹರಿಯುತ್ತ ಸಾಗಿದ ಕಲ್ಪನೆಯನ್ನು ವಾಚಕ ಮಹಾಶಯರು ಮಾಡಿಕೊಂಡರೆ ಇಡೀ ಪ್ರಸಂಗದ ಭೀತಿಪೂರ್ಣ ಅನುಭವ ಅರಿವಿಗೆ ಬರಬಹುದು. ವಿಷವಿಲ್ಲದ ಹಾವಾದರೂ ಅದರ ಸ್ಪರ್ಶ ಮೈಯಲ್ಲಿ ಮುಳ್ಳೇಳಿಸುತ್ತದೆ. ಬಾಲ್ಯದಿಂದಲೂ ಹಾವಿನ ಬಗ್ಗೆ ಮನಸ್ಸಿನಲ್ಲಿ ಅಚ್ಚೊತ್ತಿದ್ದ ಭೀತಿ ಪೂರ್ವಾಪರ ಯೋಚನೆಗೆ ಅವಕಾಶ ಕೊಡದೆ ಇದ್ದಕ್ಕಿದ್ದಂತ ಗಾಬರಿ ಹುಟ್ಟಿಸುತ್ತದೆ. ಕೇರೆಹಾವುಗಳಿಂದ ಉಪದ್ರವ ಇಲ್ಲವೆಂದು ತಿಳಿದಿದ್ದರೂ ಸುಪ್ತಪ್ರಜ್ಞೆಯಲ್ಲಿನ ಭೀತಿ ಅನೈಚ್ಛಿಕವಾಗಿ ನನ್ನ ಕೈ ಕೊಡವಿ ಹಾವು ಎಂದು ಕೂಗಲು ಪ್ರೇರೇಪಿಸಿತು.

ನನ್ನ ಗಾಬರಿಗೊಂಡ ಕೂಗಿಗೆ ಹಾವಿನ ಬಗ್ಗೆ ಅತೀವ ಭಯವಿದ್ದ ಚಾಲಕನ ಜಂಘಾಬಲವೇ ಉಡುಗಿ ಹೋಯಿತು. ವೇಗವಾಗಿ ಚಲಿಸುತ್ತಿದ್ದ ಜೀಪಿನ ಸ್ಟಿಯರಿಂಗ್ ವೀಲನ್ನು ಬಿಟ್ಟು ಎರಡು ಕೈ ಮತ್ತು ಕಾಲುಗಳನ್ನು ಮೇಲೆತ್ತಿ ಉದ್ರೇಕದಿಂದ 'ಎಲ್ಲಿ ಸಾರ್ ಎಲ್ಲಿ?' ಎಂದು ಕೂಗಿದ.

ನಿಯಂತ್ರಣ ತಪ್ಪಿದ ಜೀಪ್ ಬಲಗಡೆಗೆ ತಿರುಗಿ ಯದ್ವಾತದ್ವಾ ಓಡಲು ಆರಂಭಿಸಿತು. ಪುಣ್ಯಕ್ಕೆ ರಸ್ತೆ ನಿರ್ಜನವಾಗಿದ್ದು ಎದುರಿನಿಂದಾಗಲಿ, ಹಿಂದಿನಿಂದಾಗಲಿ ವಾಹನಗಳು ಬರುತ್ತಿರಲಿಲ್ಲ. ಘಟ್ಟ ಪ್ರದೇಶವಾಗಿದ್ದಲ್ಲಿ ಪ್ರಪಾತದಲ್ಲಿ ನಮ್ಮ ಮತ್ತು ಜೀಪಿನ ಸುಟ್ಟ ಅವಶೇಷಗಳಿಗಾಗಿ ಹುಡುಕಾಡಬೇಕಾಗಿತ್ತು. ಇಲ್ಲವೇ ಬೆಟ್ಟದ ಬುಡವೊಂದಕ್ಕೆ ಅಪ್ಪಳಿಸಿದ ನಮ್ಮ ಜೀಪನ್ನು ದಾರಿಹೋಕರು ನೋಡಿ ಸುದ್ದಿ ಕಳಿಸಬೇಕಾಗುತ್ತಿತ್ತು. ಸುದೈವಕ್ಕೆ ಸಿದ್ದಾಪುರದಿಂದ ತಾಳಗುಪ್ಪ ಮಾರ್ಗ ಘಟ್ಟದ ಮೇಲಿದ್ದರೂ ವಿಶಾಲವಾದ ಬಯಲಿನ ಮೂಲಕ ಸಾಗುತ್ತದೆ. ಚಾಲಕನ ಪಕ್ಕದಲ್ಲಿದ್ದ ನಾನು ಕ್ಲಚ್ ಮತ್ತು ಬ್ರೇಕ್ ಪೆಡಲ್‌ಗಳ ಮೇಲೆ ಪಾದ ಊರಿ ಜೀಪನ್ನು ನಿಯಂತ್ರಿಸಲು ಪ್ರಯತ್ನಿಸಿದೆ. ಮರಾಮತ್ ಇಲಾಖೆಯವರು ರಸ್ತೆಬದಿ ನೀರು ಹರಿಯಲು ನಿರ್ಮಿಸಿದ ಕಾಲುವೆಯೊಳಗೆ ಜೀಪಿನ ಎರಡು ಗಾಲಿಗಳು ಪ್ರವೇಶಿಸಿ ತಂತಾನೇ ಜೀಪ್ ನಿಂತುಕೊಂಡಿತು.

ಇಡೀ ಪ್ರಸಂಗ ಗಾಬರಿ ಹುಟ್ಟಿಸಿದರೂ, ನಂತರ ನಾವು ಮೂರು ಜನರಿಗೆ ಬಿದ್ದುಬಿದ್ದು ನಗುವಷ್ಟು ಹಾಸ್ಯ ದೊರಕಿತು. ಕೂಡಲೇ ಕೆಳಗಿಳಿದ ನಾನು ಮತ್ತು ಡಾ|| ಬಸವರಾಜಪ್ಪ ಹಾವನ್ನು ನಿಯಂತ್ರಿಸಿ ಬಂಧಿಸುವ ಸಲುವಾಗಿ ಕವೆ, ಕೋಲುಗಳಿಗಾಗಿ ಹುಡುಕಾಡಿದೆವು. ಕೆಳಗಿಳಿದ ಚಾಲಕ ಹಾವನ್ನು ಮತ್ತೆ ಜೀಪಿನಲ್ಲಿ ಹಾಕಿದರೆ ಶತಾಯಗತಾಯ ತಾನು ಡ್ರೈವ್ ಮಾಡುವುದಿಲ್ಲವೆಂದು ಹಟ ಹಿಡಿದ. ಆತನ ಕಡೆಗೆ ಗಮನವೀಯದೆ ಕವೆಗೋಲು ಹಿಡಿದ ನಾವಿಬ್ಬರೂ ಜೀಪನ್ನೆಲ್ಲಾ ಜಾಲಾಡಿದರೂ ಹಾವಿನ ಪತ್ತೆ ಇಲ್ಲ!

ಹಾವನ್ನು ಹೊರಗೆ ಹಾಕಿದ್ದನ್ನು ಕಣ್ಣಿನಿಂದ ನೋಡದೇ ಚಾಲಕ ಜೀಪನ್ನೇರಲು ಒಪ್ಪಲಿಲ್ಲ. ನಾವು ಹುಡುಕಾಡಿದರೂ ಹಾವು ಕಣ್ಣಿಗೆ ಬೀಳುತ್ತಿಲ್ಲ. ಬಾಗಿಲು ತೆಗೆದಾಗ ಹಾವು ಹೊರಗೆ ಹೋಗಿರಬಹುದೆಂದು ಮತ್ತು ಆದರಿಂದ ಇನ್ನಾವ ತೊಂದರೆಯಿಲ್ಲವೆಂದು ಚಾಲಕನನ್ನು ಒಪ್ಪಿಸಲು ಕಲಿತ ಬುದ್ಧಿಯನ್ನೆಲ್ಲಾ ಉಪಯೋಗಿಸಬೇಕಾಯಿತು. ಅಂತೂ ಚಾಲಕ ಅರ್ಧಮನಸ್ಸಿನಿಂದ ಜೀಪನ್ನೇರಿ ಗಾಡಿ ಓಡಿಸಿದ.

ಮೊದಲಿನ ವೇಗ, ಉತ್ಸಾಹ ಒಂದೂ ಇಲ್ಲ. ಚಲ್ತಿಕಾ ನಾಮ್ ಗಾಡಿ ಹಾಗೆ ನಮ್ಮ ಜೀಪ್ ಸಾಗುತ್ತಿದೆ. ತಾಳಗುಪ್ಪ ಒಂದು ಫರ್ಲಾಂಗ್ ದೂರವಿರಬಹುದು. ಕೆರೆ ಏರಿಯ ಮೇಲೆ ಜೀಪ್ ನಿಧಾನವಾಗಿ ಚಲಿಸುತ್ತಿದೆ. ಎಲ್ಲಿದ್ದನೋ ಏನೋ ಭುಜಂಗಪ್ಪ ನನ್ನ ಕಾಲಬಳಿ ಪ್ರತ್ಯಕ್ಷನಾದ. ಡಾ|| ಬಸವರಾಜಪ್ಪನವರ ಕೈಲಿದ್ದ ಕವೆಗೋಲು ಅವನ ತಲೆಯನ್ನು ಒತ್ತಿಹಿಡಿಯಿತು. ತಕ್ಷಣ ನಾನು ಹಾವನ್ನು ಹಿಡಿದು ಹೊರಗೆಳೆದೆ. ಹಿಂದೆಂದೂ ಜೀಪ್‌ನಲ್ಲಿ ಪ್ರಯಾಣ ಮಾಡಿದ ಈ ಕೇರೆ ಹಾವು ಬಾಲವನ್ನು ಬಡಿಯುತ್ತಾ ನನ್ನ ಕೈಯಿಂದ ನುಣುಚಿಕೊಂಡು ಹೊರಹೋಗಲು ಪ್ರಯತ್ನಿಸುತ್ತಿತ್ತು. ಕಾಳಿಂಗ ಸರ್ಪಕ್ಕೆ ಆಹಾರ ನೀಡಬೇಕೆಂಬ ಛಲಹೊತ್ತ ನಾನು, ಡಾ|| ಬಸವರಾಜಪ್ಪನವರ ಸಹಾಯದಿಂದ ಕೇರೆಹಾವನ್ನು ಚೀಲದೊಳಗೆ ಸೇರಿಸಿ ಭದ್ರವಾಗಿ ಚೀಲವನ್ನು ಮುದುರಿ ಹಿಡಿದು ಚಾಲಕನಿಗೆ ಗಾಡಿ ಮುಂಚಲಿಸಲು ತಿಳಿಸಿದೆ.

> **ಚಂಪಾಮೃತ**
>
> ಫ್ರೆಂಚ್, ಇಂಗ್ಲಿಷ್, ಸಂಸ್ಕೃತ, ಹಿಂದಿ, ಉರ್ದು, ಪರ್ಶಿಯನ್ ಪದಗಳನ್ನು ಬಳಸಿ ಕನ್ನಡದಲ್ಲಿ ಒಂದು ವಾಕ್ಯವನ್ನು ಚಂಪಾ ಹೆಣೆದಿದ್ದಾರೆ. ಅದು ಹೀಗಿದೆ: **ನಾವು ಕಂಟೀನ್ಯೂಸ್ಸಾಗಿ ಲೀಲಾಜಾಲವಾಗಿ ಬೇಜಾನ್ನಾಗಿ ಬಳಸುವ ನೂರಾರು ಶಬ್ದಗಳ, ಕ್ಲೀಷೆಗಳ ಹಕೀಕತ್ತಿನ ಬಗ್ಗೆ ನಮಗೆ ಟೆನ್‌ಶನ್ನೇ ಇಲ್ಲ.**

ಈ ಪ್ರಸಂಗ ಅವನ ಮನಸ್ಸು ಮತ್ತು ಬುದ್ಧಿಯನ್ನು ನಿಶ್ಚೇಷ್ಟಿತಗೊಳಿಸಿ ಬೆಪ್ಪನನ್ನಾಗಿ ಮಾಡಿತ್ತು. ಯಾವುದೇ ಸಮಜಾಯಿಷಿಗೆ ಒಪ್ಪದೇಹೋದ. ಕೊನೆಗೆ ತಾಳಗುಪ್ಪಕ್ಕೆ ಹೋಗಿ ಸೆಣಬಿನ ಹುರಿ ತಂದು ಭದ್ರವಾಗಿ ಚೀಲದ ಬಾಯಿ ಕಟ್ಟಿ ಮುಂದೆ ಪ್ರಯಾಣಿಸೋಣ ಎಂದು ಡಾ|| ಬಸವರಾಜಪ್ಪ ಖಾಜಿ ನ್ಯಾಯ ಮಾಡಿದರು.


ರಾತ್ರಿ 8ಕ್ಕೆ ಶಿವಮೊಗ್ಗ ತಲುಪಿದ ನಂತರ ಅರೆಜೀವವಾಗಿದ್ದ ಕೇರೆಹಾವನ್ನು ಕಾಳಿಂಗ ಸರ್ಪದ ಗೂಡಿನಲ್ಲಿ ಎಸೆದ ಕೂಡಲೇ ಕರಿಯ ಕಾಳಿಂಗ ಸರ್ಪ ಗಪ್ಪನೇ ಭುಜಂಗರಾಯನ ತಲೆ ಹಿಡಿದು ನಿಧಾನವಾಗಿ ನುಂಗುತ್ತಾ ಅನೇಕ ದಿನಗಳ ತನ್ನ ಕ್ಷುದ್ಬಾಧೆಯನ್ನು ನೀಗಿಸಿಕೊಂಡಿತು.

❃

ವ್ಯಂಗ್ಯ ಚಿತ್ರಕಾರ

- ಸುಮಂತ ಬರುವಾ

ವಿಜ್ಞಾನದ ವಿಷಯಗಳ ಬಗ್ಗೆ ವ್ಯಂಗ್ಯ ಚಿತ್ರಗಳನ್ನು ರಚಿಸುವ ಸುಮಂತ ಬರುವಾ ಮೂಲತಃ ಅಸ್ಸಾಮಿನವರಾದರೂ ಈಗ ಸದ್ಯಕ್ಕೆ ಬೆಂಗಳೂರಿಗರಾಗಿದ್ದಾರೆ. ರಸಾಯನಶಾಸ್ತ್ರದಲ್ಲಿ ಪದವೀಧರರಾಗಿರುವ ಸುಮಂತ ಕಂಪ್ಯೂಟರ್ ಅಪ್ಲಿಕೇಷನ್ ವಿಷಯದಲ್ಲಿ ಪರಿಣತಿ ಪಡೆದು ಈಗ ಸ್ಯಾಮ್‌ಸಂಗ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿಜ್ಞಾನದ ವಿಷಯಗಳ ಮೇಲೆ ವ್ಯಂಗ್ಯಚಿತ್ರಗಳನ್ನು ರಚಿಸುವುದರ ಮೂಲಕ ಮಕ್ಕಳಿಗೆ ವಿಜ್ಞಾನದಲ್ಲಿ ಆಸಕ್ತಿ ಮೂಡಿಸುವ ಉದ್ದೇಶ ಇವರದ್ದು. ಸ್ವಂತ ಕಲಿಕೆಯಿಂದ ವ್ಯಂಗ್ಯಚಿತ್ರ ರಚನಾ ಕೌಶಲವನ್ನು ಪಡೆದಿರುವ ಸುಮಂತರು ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ತಮ್ಮ ಕಲಾಪ್ರದರ್ಶನವನ್ನು ನಡೆಸಿದ್ದು ಇವರ ಹೆಗ್ಗಳಿಕೆ. ಶ್ರೀಯುತರ ಹಲವು ವ್ಯಂಗ್ಯಚಿತ್ರಗಳನ್ನು ಅಪರಂಜಿ ಓದುಗರಿಗೆ ಪರಿಚಯಿಸುವ ಉದ್ದೇಶದಿಂದ ಮಿತ್ರ ನರೇಂದ್ರ ಅವರನ್ನು ಈ ಕುರಿತು ಕೇಳಿಕೊಂಡಾಗ ಅವರು ಬಹು ವಿಶ್ವಾಸದಿಂದ ಮರುದಿನವೇ ಈ ಚಿತ್ರಗಳನ್ನು ಕಳಿಸಿಕೊಟ್ಟರು. ಅವರಿಗೂ ಸುಮಂತರವರಿಗೂ ನಮ್ಮ ಕೃತಜ್ಞತೆಗಳು.





Think ಕೀ ಎಲ್ಲಿದೆ ಇದ್ರಲ್ಲಿ ಡ್ಯಾಡೀ ?



ಒಂದು ಅಪೂರ್ವ ವ್ಯಕ್ತಿ

- ಎಸ್.ಎಂ. ಪೆಜತ್ತಾಯ

[ಶ್ರೀ ಎಸ್.ಎಂ. ಪೆಜತ್ತಾಯ ಅವರ ಕಥಾ ಸಂಕಲನ "ಕಾಗದದ ದೋಣಿ" ಯಿಂದ ಆಯ್ದ ಒಂದು ಪ್ರಸಂಗ]

ಶರೀಫ್ ಸಾಹೇಬರು ಚಿಕ್ಕಮಗಳೂರಿನ ಹಿರಿಯ ಪ್ಲಾಂಟರ್. ಅವರದು ಖಾಂದಾನೀ ಮುಸ್ಲಿಮ್ ಮನೆತನ. ಅವರು ಆಗರ್ಭ ಶ್ರೀಮಂತರು. ಬಾಬಾಬುಡಾನ್‌ಗಿರಿಯಲ್ಲಿನ ಅವರ ದೊಡ್ಡ ತೋಟ ಹೆಸರುವಾಸಿಯಾದ ತೋಟ. ದಾನಧರ್ಮಗಳಿಗೆ ಮತ್ತು ಅತಿಥಿಸತ್ಕಾರಕ್ಕೆ ಅವರು ಚಿಕ್ಕಮಗಳೂರು ಜಿಲ್ಲೆಯಲ್ಲೇ ಹೆಸರು ಪಡೆದಿದ್ದರು. ಚಿಕ್ಕಮಗಳೂರು ಪಟ್ಟಣದಲ್ಲಿ ಮತ್ತು ಬೆಂಗಳೂರಿನಲ್ಲಿ ಅವರಿಗೆ ದೊಡ್ಡ ವಾಸದ ಬಂಗಲೆಗಳಿವೆ. ಹೆಚ್ಚಾಗಿ ಅವರು ಚಿಕ್ಕಮಗಳೂರಿನ ಬಂಗಲೆಯಲ್ಲಿ ವಾಸವಾಗಿರುತ್ತಿದ್ದರು.

1980ನೇ ಇಸವಿ ಇರಬೇಕು, ನಾನೊಂದು ದಿನ ಕಾರ್ಯನಿಮಿತ್ತವಾಗಿ ಚಿಕ್ಕಮಗಳೂರಿಗೆ ಹೋದಾಗ ಒಂದು ರಾತ್ರಿಯ ಮಟ್ಟಿಗೆ ಅನಿವಾರ್ಯವಾಗಿ ಅಲ್ಲಿ ಉಳಿಯಲೇಬೇಕಾಯಿತು. ನಾನು ನಮ್ಮ ತೋಟದಿಂದ ಬರೇ ನೂರಾ ಐದು ಕಿ.ಮೀ. ದೂರದಲ್ಲಿ ಇರುವ ಚಿಕ್ಕಮಗಳೂರಿನಲ್ಲಿ ಉಳಿಯಲು ಹೆಚ್ಚಾಗಿ ಇಷ್ಟಪಡುವುದಿಲ್ಲ. ಸಾಮಾನ್ಯವಾಗಿ ರಾತ್ರಿ ಎಷ್ಟು ಹೊತ್ತಾದರೂ, ಕೆಲಸಗಳನ್ನು ಮುಗಿಸಿಕೊಂಡು, ನಮ್ಮ ಸುಳಿಮನೆ ಕಾಫಿತೋಟಕ್ಕೆ ಹಿಂತಿರುಗಲು ಇಷ್ಟಪಡುತ್ತೇನೆ. ಆದರೆ, ಆದಿನ ಚಿಕ್ಕಮಗಳೂರಿಗೆ ಹೋದ ಮುಖ್ಯ ಕೆಲಸವೇ ಆಗಿರಲಿಲ್ಲ. ನಾನು ನಮ್ಮ ಆಡಿಟರನ್ನು ಕಾಣಲು ಹೋಗಿದ್ದೆ. ಅವರು ಆದಿನ ಊರಿನಲ್ಲಿ ಇರಲಿಲ್ಲ. ಅವರನ್ನು ಫೋನ್‌ನಲ್ಲಿ ಸಂಪರ್ಕಿಸಿದಾಗ "ಮರುದಿನ ಬೆಳಗ್ಗೆ ಏಳು ಗಂಟೆಗೆ ಖಂಡಿತವಾಗಿಯೂ ಭೆಟ್ಟಿಯಾಗುವೆ" ಎಂದು ಹೇಳಿದ್ದರು. ರಾತ್ರಿ ಮನೆಗೆ ಓಡಿಹೋಗಿ, ಮರುದಿನ ಬೆಳಗ್ಗೆ ಬೇಗನೆ ಎದ್ದು ಪುನಃ ಚಿಕ್ಕಮಗಳೂರಿಗೆ ಹಿಂತಿರುಗಿ ಬರುವುದು ತ್ರಾಸದಾಯಕ ಮತ್ತು ಸಮಯ ವ್ಯರ್ಥ ಎಂದು ಕಂಡಿತು. ಚಿಕ್ಕಮಗಳೂರಿನ ಪ್ಲಾಂಟರ್ಸ್ ಕೋರ್ಟ್ ಎಂಬ ಉತ್ತಮ ಹೋಟೆಲಿನಲ್ಲಿ ರೂಮ್ ಪಡೆದು, ವಾಸ್ತವ್ಯ ಹೂಡಿದೆ.

ನನಗೆ ರಾತ್ರಿಯ ಹೊತ್ತು ಏನಾದರೂ ಓದುವ ಅಭ್ಯಾಸ. ಜಿಟಿಜಿಟಿ ಮಳೆ ಬೇರೆ ಬೀಳುತ್ತಾ ಇತ್ತು. ಈ ಹೋಟೆಲ್ ಇರುವುದು ಚಿಕ್ಕಮಗಳೂರು-ಮಂಗಳೂರು ರಸ್ತೆಯಲ್ಲಿ, ಪೇಟೆಯಿಂದ ಒಂದು ಕಿ.ಮೀ. ದೂರ. ಹೋಟೆಲಿನ ಹತ್ತಿರದಲ್ಲಿ ಯಾವುದೇ ಪುಸ್ತಕದ ಅಂಗಡಿಗಳು ಇಲ್ಲ. ಆಗಲೇ ಗಂಟೆ ಎಂಟಾಗಿತ್ತು. ಬೇಗನೆ ಮಹಾತ್ಮಗಾಂಧಿ ರಸ್ತೆಯ ಪುಸ್ತಕದ ಅಂಗಡಿಗೆ ಹೋಗಿ, "ಓದಲು ಏನಾದರೂ ಮ್ಯಾಗಜಿನ್ ಅಥವಾ ಪುಸ್ತಕ ತರೋಣ" ಎಂದು ನನ್ನ ಹಸಿರು ಬಣ್ಣದ ಮಾರುತಿ ಜಿಪ್ಸಿ ಜೀಪ್ ಹೊರಡಿಸಿದೆ.

ನಾನು ಪುಸ್ತಕ ಕೊಳ್ಳುತ್ತಿರುವಾಗ, ಗ್ರೀಟಿಂಗ್ ಕಾರ್ಡ್‌ಗಳನ್ನು ಕೊಳ್ಳಲು ಬಂದಿದ್ದ ಶ್ರೀಮಾನ್ ಶರೀಫ್ ಸಾಹೇಬರ ದರ್ಶನವಾಯಿತು. 'ಹಲ್ಲೋ ಕೇಸರಿ, ಏನು ಇಷ್ಟು

ಹೊತ್ತಿನಲ್ಲಿ ನೀವು ಇಲ್ಲಿ?' ಎಂದು ವಿಚಾರಿಸುತ್ತಾ ಅವರು ಮಾತಿಗಿಳಿದರು. ನನ್ನ ಹೆಸರು ಮಧುಸೂದನ ಪೆಜತ್ತಾಯ ಎಂದಿದ್ದರೂ, ಚಿಕ್ಕಮಗಳೂರಿನಲ್ಲಿ ಹೆಚ್ಚಿನವರು ನನ್ನನ್ನು ನನ್ನ 'ಪೆಟ್‌ನೇಮ್' ಆದ ''ಕೇಸರಿ'' ಎಂಬ ನಾಮಧೇಯದಿಂದಲೇ ಕರೆಯುತ್ತಾರೆ. ನನಗೆ ಶರೀಫ್ ಸಾಹೇಬರ ಪರಿಚಯ ಮೊದಲೇ ಇತ್ತು. ಅವರಿಗೆ ಮತ್ತು ನನಗೆ ಒಬ್ಬರೇ ಆಡಿಟರು.

''ಇಂದು ಆಡಿಟರ್ ಸಿಗಲಿಲ್ಲ. ಮೂಡುಗೆರೆ ಹತ್ತಿರದ ಶ್ರೀ ಎಮ್. ಆರಾನ್ನಾ ಅವರ ಸಬ್ಬೇನಹಳ್ಳಿ ಕಾಫಿ ತೋಟಕ್ಕೆ ಹೋಗಿದ್ದಾರೆ. ಅವರು ರಾತ್ರಿ ಹಿಂತಿರುಗಿ ಬರುವಾಗ ತಡವಾಗಬಹುದು ಎಂದು ಅವರ ಆಫೀಸಿನಲ್ಲಿ ಹೇಳಿದರು. ಶ್ರೀ ಆರಾನ್ನಾರ ಮನೆಗೆ ಫೋನ್ ಮಾಡಿ, ಅವರನ್ನು ಸಂಪರ್ಕಿಸಿದೆ. ಅವರು ನನಗೆ ನಾಳೆ ಬೆಳಗ್ಗೆ ಏಳುಗಂಟೆಗೆ ಸಿಗುವುದಾಗಿ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ'' ಎಂದು ಹೇಳಿದೆ.

''ಇಂದು ನಮ್ಮ ಮನೆಯಲ್ಲಿ ಉಳಿಯಿರಿ!'' ಎನ್ನುತ್ತಾ ಆ ಹಿರಿಯರು ನನ್ನನ್ನು ಒತ್ತಾಯಿಸಿದರು. ಅದಕ್ಕೆ ನಾನು ಈಗಾಗಲೇ ಪ್ಲಾಂಟರ್ಸ್‌ಕೋರ್ಟ್ ಹೋಟೆಲಿನಲ್ಲಿ ಒಂದು ರೂಮ್ ತೆಗೆದುಕೊಂಡಿರುವುದಾಗಿ ಹೇಳಿದೆ. ''ರೂಮ್ ಖಾಲಿ ಮಾಡಿ ನಮ್ಮಲ್ಲಿಗೆ ಬಂದರಾಯಿತು'' ಎಂದು ಒತ್ತಾಯಿಸಿದರು ಆ ಹಿರಿಯರು. ನಾನು, ''ಸರ್, ಹೇಗೂ ರೂಮ್ ತೆಗೆದುಕೊಂಡಾಯ್ತು ಯಾವಾಗಲಾದರೂ ಇನ್ನೊಮ್ಮೆ ಚಿಕ್ಕಮಗಳೂರಿನಲ್ಲಿ ಉಳಿಯಬೇಕಾದಾಗ ಖಂಡಿತವಾಗಿ ನಿಮ್ಮಲ್ಲಿಗೇ ಬರುವೆ'' ಎಂದು ಸಮಾಧಾನ ಹೇಳಿದೆ. ''ಸರಿ, ಹಾಗಾದರೆ ಬೆಳಗ್ಗೆ ನಮ್ಮ ಮನೆಗೆ 'ಬ್ರೇಕ್‌ಫಾಸ್ಟ್‌ಗೆ' ಬಂದುಬಿಡಿ! ನಿಮ್ಮನ್ನು ಕಾಯುತ್ತಿರುತ್ತೇನೆ'' ಎಂದರು ಶರೀಫ್ ಸಾಹೇಬರು. ನಾನು ಸಾಧ್ಯವಿಲ್ಲವೆಂದು ಹಿರಿಯರಾದ ಅವರಿಗೆ ಉತ್ತರಿಸುವ ಹಾಗೆಯೇ ಇರಲಿಲ್ಲ!

ತರುಣ ಪ್ಲಾಂಟರುಗಳಾದ ನಾವು ಹಿರಿಯ ಪ್ಲಾಂಟರುಗಳಿಗೆ ತುಂಬಾ ಗೌರವ ನೀಡುತ್ತಿದ್ದೆವು. ಹಲವಾರು ಬಾರಿ ಆ ಹಿರಿಯರುಗಳಿಂದ ಮಾರ್ಗದರ್ಶನ ಕೂಡಾ ಪಡೆಯುತ್ತಿದ್ದೆವು. ಹಿರಿಯ ಪ್ಲಾಂಟರುಗಳನ್ನು 'ಸರ್' ಎಂದು ಸಂಬೋಧಿಸುವುದು ನಮ್ಮ ಕಟ್ಟಳೆ.

''ಆಗಲಿ ಸರ್, ಬರುತ್ತೇನೆ. ಬೆಳಗ್ಗೆ ಎಂಟೂವರೆಗೆ ತಮ್ಮ ಬಂಗಲೆಗೆ ಬರಲೇ?'' ಎಂದು ಕೇಳಿದೆ. ಅದಕ್ಕೆ ಅವರು ನಸುನಗುತ್ತಾ, ''ಬೆಳಗ್ಗೆ ಹನ್ನೊಂದಕ್ಕೆ ಬಂದರೆ ಅನುಕೂಲ'' ಎಂದರು. 'ಇದೇನು? ಇವರಲ್ಲಿ ಬೆಳಗ್ಗೆ ಹನ್ನೊಂದಕ್ಕೆ ತಿಂಡಿ?' ಎಂದು ಅಚ್ಚರಿಪಟ್ಟರೂ, ಅದನ್ನು ತೋರಿಸಿಕೊಳ್ಳದೇ ''ಹನ್ನೊಂದಕ್ಕೆ ಬರುತ್ತೇನೆ, ಸರ್! ನಾನು ಶುದ್ಧ ಸಸ್ಯಾಹಾರಿ ಎಂದು ತಮಗೆ ಗೊತ್ತಿದೆ ತಾನೇ?'' ಎಂದುತ್ತರಿಸಿ, ಅವರಿಗೆ ವಂದನೆ ಹೇಳಿದೆ.

ಅದಕ್ಕೆ ಶರೀಫ್ ಸಾಹೇಬರು ನಗುತ್ತಾ ''ನಿಮ್ಮ ಹೆಸರು ಕೇಸರಿ! ಆದರೂ ನೀವೊಬ್ಬ ವೆಜಿಟೇರಿಯನ್ ಲಯನ್!'' ಎಂದು ತಮಾಷೆ ಮಾಡುತ್ತಾ ತಮ್ಮ ಎರಡನೇ ಮಹಾಯುದ್ಧದ 1946ನೇ ಮಾಡೆಲ್ ಫೋರ್ಡ್‌ಜೀಪ್ ಏರಿದರು. ಅವರ ಜೀಪು ಅಷ್ಟು ಹಳೆಯ ಮಾಡೆಲ್ ಆದರೂ ಹೊಚ್ಚಹೊಸದರಂತೆ ಥಳಥಳಿಸುತ್ತಿತ್ತು. ಅವರು ವಾಹನಗಳನ್ನು

'ಮ್ಯೆಂಟೈನ್' ಮಾಡುವುದರಲ್ಲಿ ಚಿಕ್ಕಮಗಳೂರು ಜಿಲ್ಲೆಗೇ ಹೆಸರುವಾಸಿ. ಅವರ ಮನೆಯಲ್ಲಿ ನಾಲ್ಕಾರು ವಾಹನಗಳಿದ್ದುವು. ಎಲ್ಲ ವಾಹನಗಳೂ 'ಶೋರೂಮ್ ಮಾಡೆಲ್' ತರಹ ಜಾಗರೂಕತೆಯಿಂದ ಮ್ಯೆಂಟೈನ್ ಮಾಡಲ್ಪಡುತ್ತಿದ್ದುವು. ಅವರ ಮನೆಯಲ್ಲಿ ಎರಡು ಜನ ಡ್ರೈವರುಗಳು ಇದ್ದರು. ಅವರ ತೋಟದಲ್ಲೇ ಕೆಲಸಕ್ಕೆ ಇದ್ದ ಮೆಕ್ಯಾನಿಕ್ ಒಬ್ಬನಿಗೆ ಅವರ ವಾಹನಗಳನ್ನು ಸುಸ್ಥಿತಿಯಲ್ಲಿಟ್ಟು ಹೊಸ ವಾಹನಗಳ ರೀತಿ ಕಾಣುವಂತೆ ನೋಡಿಕೊಳ್ಳುವುದೇ ಕೆಲಸ ಆಗಿತ್ತು. ಅವರ ಮಿಲಿಟರಿ ಮಾಡೆಲ್ ಫೋರ್ಡ್ 'ಓಪನ್ ಜೀಪಿಗೆ' ಮುಂದುಗಡೆಯ ಗ್ಲಾಸಿನ ಹತ್ತಿರ 'ಮಿಲಿಟರಿಯ ರೈಫಲ್ ರ್‍ಯಾಕ್' ಕೂಡಾ ಇತ್ತು. ಶರೀಫ್ ಸಾಹೇಬರು ತೋಟಕ್ಕೆ ಹೋಗುವಾಗ ತಮ್ಮಲ್ಲಿದ್ದ ಬಂದೂಕುಗಳಲ್ಲಿ ಒಂದನ್ನು ಆ ಸ್ಟ್ಯಾಂಡಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಶರೀಫ್ ಸಾಹೇಬರ ಕಾರುಗಳನ್ನು ನೋಡುವುದೆಂದರೆ ನನಗೆ ಯಾವಾಗಲೂ ಇಷ್ಟ. ಆ ವಾಹನಗಳ ಮೇಲೆ ಒಂದು ಧೂಳಿನ ಕಣ ಕೂರಲೂ ಅವರು ಬಿಡುತ್ತಿರಲಿಲ್ಲ. ಅವರ ಕಾರುಗಳಂತೆ ಅವರ ಬಂಗಲೆಗಳು ಕೂಡಾ ಅದೇ ಸ್ವಚ್ಛತೆಯಿಂದ ಮೆರೆಯುತ್ತಿದ್ದುವು.

ಶರೀಫ್ ಸಾಹೇಬರು ತುಂಬಾ ಶಿಸ್ತಿನ ಮನುಷ್ಯ. ಅವರ ತೋಟ, ಮನೆ, ಕಾರುಗಳು, ಬಂದೂಕುಗಳು ಎಲ್ಲವೂ ಅಚ್ಚುಕಟ್ಟು. ಅವರ ದಿರಿಸು ಕೂಡಾ ತುಂಬಾ ಅಚ್ಚುಕಟ್ಟು. ಅವರು ತೆಳ್ಳಗಿನ ನೀಳಕಾಯದ ವ್ಯಕ್ತಿ. ಅವರ ಬೂಟುಗಳು ಯಾವಾಗಲೂ ಕನ್ನಡಿಯಂತೆ ಮಿರುಗುತ್ತಿದ್ದುವು.

ನಾನು ನನ್ನ ಹೋಟೆಲಿನ ರೂಮಿಗೆ ಹೋಗಿ ಸ್ವಲ್ಪ ಹೊತ್ತು ನ್ಯೂಸ್ ಪೇಪರುಗಳನ್ನು ನೋಡಿದೆ. ಚಿಕ್ಕಮಗಳೂರಿಗೆ ಆಗ ಟೀವಿ ಪ್ರಸಾರ ಇನ್ನೂ ಬಂದಿರಲಿಲ್ಲ. ರಾತ್ರಿಯ ಊಟಮಾಡಿ ಸ್ವಲ್ಪ ಹೊತ್ತಿನವರೆಗೆ ಪುಸ್ತಕ ಓದಿ, ಆಮೇಲೆ ನಿದ್ದೆ ಮಾಡಿದೆ. ಮರುದಿನ ಬೆಳಗ್ಗೆ ಆರುಗಂಟೆಗೆ ಎದ್ದು ಪ್ರಾತರ್ವಿಧಿಗಳನ್ನು ಪೂರೈಸಿ ಒಂದು ಕಪ್ ಕಾಫಿ ಕುಡಿದೆ.

ಸರಿಯಾಗಿ ಏಳುಗಂಟೆಗೆ ನಮ್ಮ ಆಡಿಟರನ್ನು ಕಂಡೆ. ಎಂಟುಗಂಟೆಗೆ ನನ್ನ ಕೆಲಸ ಮುಗಿಯಿತು. ಪ್ಲಾಂಟರ್ಸ್‌ಕೋರ್ಟ್ ಹೋಟೆಲಿಗೆ ಬಂದು ಮಾಮೂಲಿ ಸಮಯಕ್ಕೆ ಸ್ವಲ್ಪ ಲಘು ಉಪಾಹಾರ ತೆಗೆದುಕೊಂಡೆ. ಬೆಳಗಿನ ಹನ್ನೊಂದಕ್ಕೆ ಶರೀಫ್ ಸಾಹೇಬರಲ್ಲಿ ನನಗೆ ಉಪಾಹಾರದ ಆಹ್ವಾನ ಇತ್ತು. ಆದರೆ, ಅದು ತನಕ ನಾನು ಉಪವಾಸವಿರಲು ಸಾಧ್ಯವಿರಲಿಲ್ಲ. 'ಈ ಶರೀಫ್ ಸಾಹೇಬರು ಬೆಳಗ್ಗೆ ಎಷ್ಟು ಹೊತ್ತಿಗೆ ಏಳುತ್ತಾರೆ? ಇಷ್ಟು ತಡವಾಗಿ ಏಳುವ ಈ ಶ್ರೀಮಂತ ಅದೆಷ್ಟು ಹೊತ್ತಿಗೆ ರಾತ್ರಿ ಮಲಗಿಯಾರು? ಅವರು ಖಂಡಿತವಾಗಿ, ಬೆಳಗಿನಜಾವದ ತನಕ ಕ್ಲಬ್ಬು ಅಥವಾ ಪಾರ್ಟಿಗಳಲ್ಲಿ ಕಾಲ ಕಳೆಯುತ್ತಾರೆ!' ಎಂತ ಲೆಕ್ಕಹಾಕಿದೆ. ಅವರ ವಿಚಿತ್ರವಾದ ದಿನಚರಿಯ ಬಗ್ಗೆ ಆಲೋಚಿಸಿದಾಗ ನನಗೆ ಮನಸ್ಸಿನಲ್ಲೇ ನಗುಬಂತು.

ಸರಿಯಾಗಿ ಹನ್ನೊಂದಕ್ಕೆ ಶರೀಫ್ ಸಾಹೇಬರ ಬಂಗಲೆ ತಲುಪಿದೆ. ಬಂಗಲೆಯ ಗೇಟ್ ತೆರೆದ ಅವರ ಡ್ರೈವರ್ ನನಗೆ ಸಲಾಮ್ ಮಾಡಿ "ಸರ್! ತಮ್ಮ ಜೀಪನ್ನು ಪಾರ್ಕ್ ಮಾಡುತ್ತೇನೆ" ಎಂದು ಹೇಳಿದ. ನಾನು ಜೀಪಿನ ಕೀಲಿ ಅವನ ಕೈಗೆಕೊಟ್ಟು ಅವರ

ಮನೆಯನ್ನು ಪ್ರವೇಶಿಸಿದೆ. ಮುಂದಿನ ಹಜಾರದಲ್ಲಿ ನನ್ನ ಬೂಟ್‌ಗಳನ್ನು ಬಿಚ್ಚಿದೆ. ಅಷ್ಟರಲ್ಲಿ ಒಬ್ಬ ಚೋಕ್ರಾ (ಕೆಲಸದ ಹುಡುಗ) ನನ್ನ ಎದುರಿಗೆ ಒಂದು ಜೊತೆ ಮನೆಯಲ್ಲಿ ತೊಡುವ ಹೊಸ ಚಪ್ಪಲಿಗಳನ್ನು ತಂದಿರಿಸಿ ಅವುಗಳನ್ನು ಧರಿಸಿಕೊಳ್ಳಲು ತಿಳಿಸಿದ. ನಾನು ಚಪ್ಪಲಿಗಳನ್ನು ಧರಿಸಿ ಎದ್ದು ನಿಲ್ಲುತ್ತಲೇ, ನೀಟಾಗಿ ಡ್ರೆಸ್‌ಮಾಡಿಕೊಂಡು ಸಿಲ್ಕಿನ ಹೌಸ್‌ಕೋಟ್ ತೊಟ್ಟ ಶರೀಫ್ ಸಾಹೇಬರು ''ಗುಡ್‌ಮಾರ್ನಿಂಗ್, ಕೇಸರಿ'' ಎನ್ನುತ್ತಾ ಬಂದು ನನ್ನನ್ನು ತಬ್ಬಿ ಸ್ವಾಗತಿಸಿದರು.

ನನ್ನ ಕೈಹಿಡಿದು ಮನೆಯ ಸಿಟ್ಟಿಂಗ್ ರೂಮಿಗೆ ಕರೆದೊಯ್ದು ದೊಡ್ಡ ಸೋಫಾದಲ್ಲಿ ಕುಳ್ಳಿರಿಸಿ ನನ್ನ ಪಕ್ಕಕ್ಕೆ ಕುಳಿತರು. ಅವರ ಬಟ್ಲರ್, ದಿನದ ಇಂಗ್ಲಿಷ್ ಮತ್ತು ಕನ್ನಡಪತ್ರಿಕೆಗಳನ್ನು ನನ್ನ ಎದುರಿಗೆ ಬೆಳ್ಳಿಯ ಟ್ರೇಯಲ್ಲಿ ತಂದಿರಿಸಿ, ನನ್ನನ್ನು ಉದ್ದೇಶಿಸಿ, ''ಸಲಾಮ್ ಸಾಬ್!'' ಎಂದ. ಪ್ರತಿವಂದನೆ ಹೇಳಿದೆ. ''ಪೇಪರ್ ನೋಡಿ, ಕೇಸರೀ'' ಎನ್ನುತ್ತ ಶರೀಫ್ ಸಾಹೇಬರು ನನಗೆ ಎರಡು ಔನ್ಸಿನಷ್ಟು ಹಿಡಿಸುವ ಡ್ರೆಸ್ಡೆನ್ ಪಿಂಗಾಣಿಯ ಪುಟ್ಟ ಅರೇಬಿಯನ್ ಸೈಜಿನ ಕಪ್‌ನಲ್ಲಿ ಖಾವ (ಕಡುಕಾಫಿ) ಇತ್ತರು. ಯಾಲಕ್ಕಿ ಹಾಕಿ ಕಾಸಿದ್ದ ಆ ಬಾಬಾಬುಡಾನ್‌ಗಿರಿಯ ಉತ್ಕೃಷ್ಟ ಕಾಫಿ ಸುಮಧುರವಾಗಿತ್ತು. ನಾನು ಕಾಫಿ ಕುಡಿಯುತ್ತಾ ದಿನಪತ್ರಿಕೆಯ ಮೇಲೆ ಕಣ್ಣಾಡಿಸಿದೆ. ಕಪ್ ಖಾಲಿಯಾಗುತ್ತಲೇ ಶಿಷ್ಟಾಚಾರಕ್ಕೆ 'ಇನ್ನೂ ಸ್ವಲ್ಪ ಕಾಫಿ' ಎನ್ನುತ್ತಾ ಸ್ವಲ್ಪ ಕಾಫಿ ಕಪ್ಪಿಗೆ ಸುರಿದರು. ನಾನು ''ಥ್ಯಾಂಕ್ಸ್, ಸರ್'' ಎನ್ನುತ್ತ ಕಪ್ ಕೈಗೆತ್ತಿಕೊಂಡೆ. ಅದನ್ನು ಕುಡಿದು ಮುಗಿಸಿದಾಗ ಶರೀಫ್ ಸಾಹೇಬರು ಪುನಃ ಬೆಳ್ಳಿಯ ಕೆಟಲ್ ಕೈಗೆತ್ತಿಕೊಂಡರು. ನಾನು ಕಪ್ಪನ್ನು ಕೈಬೆರಳುಗಳಿಂದ ಮುಚ್ಚಿ ಬೇಡವೆಂದು ತಲೆ ಆಡಿಸುತ್ತಾ ''ನೋ, ಥ್ಯಾಂಕ್ ಯೂ, ಸರ್!'' ಎಂದೆ. ಈ ತರಹದ ಕಡುಕಾಫಿಯ ಸ್ವಾಗತದ ರಿವಾಜು ಅರೇಬಿಯಾದ ಶ್ರೀಮಂತರಲ್ಲಿ ಇದೆ ಎಂದು ಕೇಳಿಬಲ್ಲವನಾಗಿದ್ದೆ. ಎರಡು ಸಲ ಕಾಫಿ ಹಾಕಿಸಿಕೊಂಡು ನಂತರ 'ಕಾಫಿ ಬೇಡ' ಎನ್ನಬಹುದಂತೆ! ಅರೇಬಿಯಾ ದೇಶದಲ್ಲಿ 'ಮೊದಲ ಕಪ್ಪಿಗೇ ಸಾಕು ಎಂದರೆ ಅತಿಥೇಯರಿಗೆ ಅವಮಾನ ಮಾಡಿದಂತೆ!' ಎಂಬ ಭಾವನೆ ಅತಿಥೇಯರಲ್ಲಿ ಉಂಟಾಗುತ್ತದಂತೆ! ಈ ಕ್ರಮದ ಬಗ್ಗೆ ನನಗೆ ಹಲವಾರು ವರ್ಷ ಅರೇಬಿಯಾದ 'ಬರ್ಮಾ ಶೆಲ್' ಆಯಿಲ್ ಕಂಪನಿಯಲ್ಲಿ ಹಿರಿಯ ಅಧಿಕಾರಿಯಾಗಿ ಕೆಲಸ ಮಾಡಿ ರಿಟಾಯರ್ ಆದ ಹಿರಿಯರೊಬ್ಬರು ವಿವರಿಸಿ ಹೇಳಿದ್ದರು. ''ಅತಿಥಿಯು ಎರಡನೇ ಸಲ ಸ್ವಲ್ಪವಾದರೂ ಕಾಫಿಯನ್ನು ಶಿಷ್ಟಾಚಾರಕ್ಕೆ ಕುಡಿಯಲೇಬೇಕು!'' ಎಂಬ ಬಗ್ಗೆ ನನಗಾಗಲೇ ಗೊತ್ತಿದ್ದರಿಂದ, ಎರಡನೇ ಬಾರಿ ಕಾಫಿ ಸೇವಿಸಿದ್ದೆ.

ಅವರ ಅರೇಬಿಯನ್ ರೀತಿಯ ಕಾಫಿ ಕೊಟ್ಟು ಸತ್ಕರಿಸುವ ಸ್ವಾಗತಕ್ಕೆ ನನ್ನ ಪ್ರತಿಕ್ರಿಯೆ ಮತ್ತು ಶಿಷ್ಟಾಚಾರದ ಸೌಜನ್ಯದ ನಡವಳಿಕೆಯು ಶರೀಫ್ ಸಾಹೇಬರಿಗೆ ಒಪ್ಪಿಗೆ ಆಯಿತೆಂದು ಅವರ ಮಂದಹಾಸದಿಂದ ನನಗೆ ತಿಳಿಯಿತು.

''ಕೇಸರಿ, ಕ್ಷಮಿಸಿ! ಇಂದು ನಮ್ಮ ಬೇಗಂ ಸಾಹೀಬಾ ಮತ್ತು ಮಕ್ಕಳು ಮನೆಯಲ್ಲಿಲ್ಲ. ಅವರೆಲ್ಲಾ ಬೆಂಗಳೂರಿಗೆ ಹೋಗಿದ್ದಾರೆ. ಇಂದು ನಾನೊಬ್ಬನೇ ನೌಕರರೊಡನೆ ನಿಮ್ಮನ್ನು ಸ್ವಾಗತಿಸುತ್ತಿದ್ದೇನೆ. ಈ ವಿಚಾರ ನಾನು ನಿನ್ನೆ ತಮಗೆ ತಿಳಿಸದೇ ಇದ್ದುದಕ್ಕೆ ಕ್ಷಮೆಯಿರಲಿ''

ಎಂದರು ಮೆಲುದನಿಯಲ್ಲಿ. ನಾನು "ಪರವಾಗಿಲ್ಲ, ಸರ್, ತಾವು ನನ್ನನ್ನು ಇಂದು ಬೆಳಗಿನ ಉಪಹಾರಕ್ಕೆ ಪ್ರೀತಿಯಿಂದ ಕರೆದುದು ನನಗೆ ದೊಡ್ಡ ಗೌರವ" ಎಂದೆ.

"ಬನ್ನಿ, ಉಪಹಾರ ಮಾಡೋಣವೇ?" ಎನ್ನುತ್ತಾ ತಮ್ಮ ಮನೆಯ ಊಟದ ಹಾಲ್‌ಗೆ ಕೈ ಹಿಡಿದು ಕರೆದೊಯ್ದರು. ಹನ್ನೆರಡು ಮಂದಿ ಕೂರುವ ದೊಡ್ಡ ಕರಿಮರದ ಮೇಜು, ಮತ್ತು ಮೆತ್ತೆ ಹಾಸಿದ ಕರಿಮರದ ಕುರ್ಚಿಗಳು ಆ ಕೋಣೆಯಲ್ಲಿ ಶೋಭಿಸುತ್ತಿದ್ದವು. ಪಾಲಿಶ್ ಹಾಕಿ ಮಿರುಗುತ್ತಿದ್ದ ಮೇಜಿಗೆ ಬಿಳಿಬಣ್ಣದ ಕಸೂತಿಯ ಮೇಲ್‌ಹಾಸಲು ಹಾಸಿತ್ತು. ನಾವು ಮೇಜಿನ ಅಡ್ಡಅಡ್ಡಕ್ಕೆ ಎದುರುಬದುರಾಗಿ ಕುಳಿತೆವು. ಬಟ್ಲರ್ ಬಂದು ನಮಗೆ ನ್ಯಾಪ್ಕಿನ್‌ಗಳನ್ನು ಕೊಟ್ಟು, ಪಿಂಗಾಣಿಯ ತಟ್ಟೆಗಳನ್ನು ನಮ್ಮೆದುರು ಜೋಡಿಸಿ, ಬೆಳ್ಳಿಯ ಚಮಚ, ಫೋರ್ಕ್ ಮತ್ತು ನೈಫ್ ಇರಿಸಿ, ಗ್ಲಾಸುಗಳಿಗೆ ಬೆಳ್ಳಿಯ ಜಗ್‌ನಿಂದ ನೀರು ತುಂಬಿದನು. ಬಟ್ಲರನೂ ಆತನ ಸಹಾಯಕನೂ ಒಂದೊಂದಾಗಿ ಐಟಮ್‌ಗಳನ್ನು ತಂದು ನಮ್ಮೆದುರಿಗೆ ಇಡತೊಡಗಿದರು.

ಬಿಸಿ ಬ್ರೆಡ್‌ಟೋಸ್ಟ್, ಕಾರ್ನ್‌ಫ್ಲೇಕ್ಸ್, ಪಾರಿಜ್, ಪರಾಠಾ, ಅಕ್ಕಿರೊಟ್ಟಿ ಮತ್ತು ಪೂರಿಗಳ ದೊಡ್ಡ ಸರ್ವಿಂಗ್‌ಡಿಶ್‌ಗಳು ನಮ್ಮೆದುರಿಗೆ ಬಂದುವು. ಎರಡು ತರಹೆಯ ಜಾಮ್, ಮಾರ್ಮಲೇಡ್, ಬೆಣ್ಣೆ, ಆಲೂಪಲ್ಯ, ಹಸಿಬಟಾಣಿಯ ಪಲ್ಯ, ತರಕಾರಿ ಸಾಗು, ಕರಿದ ಪಾನೀರಿನ ವ್ಯಂಜನ, ಕೇಸರಿಬಾತ್ ಮತ್ತು ಇನ್ನೆರಡು ತರಹದ ಸಿಹಿತಿಂಡಿಗಳು ನಮ್ಮ ಎದುರಿಗೆ ಇಡಲ್ಪಟ್ಟುವು.

"ಕೇಸರೀ, ಸಂಕೋಚ ಮಾಡಬೇಡಿ, ದಯವಿಟ್ಟು ತಿಂಡಿ ತೆಗೆದುಕೊಳ್ಳಿ. ತಾವು ಎಲ್ಲ ಬಗೆಯ ತಿಂಡಿಗಳ ರುಚಿ ನೋಡಲೇಬೇಕು" ಎನ್ನುತ್ತಾ ಶರೀಫ್ ಸಾಹೇಬರು "ಬಿಸ್ಮಿಲ್ಲಾಹ್" ಎಂದರು. ನಾನು ದೇವರಿಗೆ ಕೈಮುಗಿದು ತಿನ್ನತೊಡಗಿದೆ.

ಶರೀಫ್ ಸಾಹೇಬರು ಒಂದು ಪರಾಠ ಮತ್ತು ಸ್ವಲ್ಪವೇ ಬಟಾಣಿ ಕಾಳಿನ ಪಲ್ಯ ತನ್ನ ತಟ್ಟೆಗೆ ಹಾಕಿಕೊಂಡು ತಿನ್ನುತ್ತಾ "ಕೇಸರೀ, ನೀವು ಚೆನ್ನಾಗಿ ತಿಂಡಿ ತಿನ್ನಬೇಕು ನನ್ನ ಪ್ಲೇಟ್ ಕಡೆಗೆ ನೋಡಬೇಡಿರಿ! ಈ ಪ್ರಾಯದಲ್ಲಿ ನನಗೆ ಮಿತ ಆಹಾರ ಸಾಕಾಗುತ್ತೆ. ನೀವು ಯುವಕ! ಸಂಕೋಚ ಮಾಡದೇ ಚೆನ್ನಾಗಿ ತಿನ್ನಬೇಕು. ಬೇಕಾದುದನ್ನು ಕೇಳಿ ಹಾಕಿಸಿಕೊಂಡು ತಿಂದರೆ ಮಾತ್ರ ನನಗೆ ತೃಪ್ತಿ!" ಎಂದು ನಿಧಾನವಾಗಿ ಪರಾಠಾ ತಿನ್ನುತ್ತಾ ಕುಳಿತರು.

ನನಗೆ ಆಗ ಮೂವತ್ತನಾಲ್ಕರ ಪ್ರಾಯ. ಕಲ್ಲು ತಿಂದರೂ ಕರಗಿಸಿಕೊಳ್ಳುವ ವಯಸ್ಸು! ನಾನು ಆ ದಿನಗಳಲ್ಲಿ ಚೆನ್ನಾಗೇ ಊಟ ಮಾಡುತ್ತಿದ್ದೆ. ಆದರೂ, ಶರೀಫ್ ಸಾಹೇಬರ ಟೇಬಲ್ ಮೇಲಿದ್ದ ತಿನಸುಗಳ ವೈವಿಧ್ಯ ನೋಡಿ ಆಗಲೇ ಬೆರಗಾಗಿದ್ದೆ! ಆದರೂ, ಎಲ್ಲಾ ತರಹದ ಐಟಮ್‌ಗಳ ತಟ್ಟೆಗಳಿಂದ ಬೇಕಾದಷ್ಟು ಬಡಿಸಿಕೊಂಡು ಚೆನ್ನಾಗೇ ತಿಂದೆ. ಶರೀಫ್ ಸಾಹೇಬರು ಹೆಚ್ಚಿಗೆ ಏನೂ ಬಡಿಸಿಕೊಂಡು ತಿನ್ನದಿದ್ದರೂ, ನನಗೆ ಮಾತ್ರ ಬಹುವಾಗಿ ಉಪಚಾರ ಮಾಡಿದರು. ನನ್ನ ಉಪಹಾರ ಮುಗಿಯುತ್ತಾ ಬಂದಂತೆ ಅವರು ತನ್ನ ಬಟ್ಲರಿಗೆ "ಹಣ್ಣು ಬಡಿಸು" ಎಂದರು. ಕೆಲವು ತಟ್ಟೆಗಳು ನಮ್ಮೆದುರು ಹಾಜರಾದುವು! ಹೆಚ್ಚಿದ ಪಪ್ಪಾಯಿ, ಅನಾನಾಸು, ಮಾವು, ಮೂಸಂಬಿ, ಕಾಬೂಲಿ ದಾಳಿಂಬೆ, ದ್ರಾಕ್ಷಿ, ಬಾಳೆಹಣ್ಣುಗಳ ತಟ್ಟೆಗಳು ನಮ್ಮೆದುರು ಕುಳಿತವು. ಶರೀಫ್ ಸಾಹೇಬರು ನಾಲ್ಕು ಹೋಳು ಪಪ್ಪಾಯಿ ಹಣ್ಣು ತನ್ನ ತಟ್ಟೆಗೆ

ಬಡಿಸಿಕೊಂಡರು. ''ಈ ವಯಸ್ಸಿನಲ್ಲಿ ಇಷ್ಟು ನನಗೆ ಸಾಕು! ನೀವು ಮಾತ್ರ ಎಲ್ಲಾ ತರಹೆಯ ಹಣ್ಣುಗಳನ್ನೂ ತಿನ್ನಬೇಕು!'' ಎನ್ನುತ್ತಾ ಒತ್ತಾಯ ಮಾಡಿದರು. ನಾನು ಎಲ್ಲಾ ಹಣ್ಣುಗಳ ರುಚಿಯನ್ನು ನೋಡುವಷ್ಟರಲ್ಲಿ ನನ್ನ ಹೊಟ್ಟೆ ಬಿರಿಯುವಂತಾಯಿತು.

''ಕೇಸರಿ! ನೀವು ನಮ್ಮ ತೋಟದ ಆರೆಂಜ್ ರುಚಿ ನೋಡಬೇಕಿತ್ತು! ಆದರೆ, ಈಗ ಆರೆಂಜ್ ಸೀಸನ್ ಅಲ್ಲ!'' ಎಂದು ಶರೀಫ್ ಸಾಹೇಬರು ವ್ಯಥೆಪಟ್ಟರು.

ಬಿಸಿಬಿಸಿ ಟೀ ಚಿತ್ತಾರದ ಪಿಂಗಾಣಿಯ ವಿಲಾಯತೀ ಕಪ್ಪುಗಳಲ್ಲಿ ಬಂತು! ನಾವು ಟೀ ಕುಡಿದಂತೆಯೇ ಬಟ್ಲರ್ ಕಪ್ಪುಗಳಿಗೆ ಟೀ ತುಂಬಿಸತೊಡಗಿದ. ಶರೀಫ್ ಸಾಹೇಬರು 'ಕಪ್ಪು ಟೀ' ಸೇವಿಸಿದರು. ''ನನಗೂ ಕಪ್ಪು ಟೀ ಆಗಬಹುದು!'' ಎಂದೆ.

''ಕೇಸರೀ! ನಿಮ್ಮ ಪ್ರಾಯಕ್ಕೆ ಬೆಳಗಿನ ಹೊತ್ತು ಹಾಲುಹಾಕಿದ ಟೀಯೇ ಸರಿ! ಅವರಿಗೆ ಹಾಲು ಮತ್ತು ಸಕ್ಕರೆ ಬೆರಸಿದ ಟೀ ಹಾಕು'' ಎಂದು ಬಟ್ಲರನಿಗೆ ಆಜ್ಞಾಪಿಸಿದರು. ಒಂದು ಅರ್ಧ ಲೀಟರಿನಷ್ಟು ಹಾಲುಸಕ್ಕರೆ ಬೆರೆಸಿದ ಅತ್ಯಂತ ರುಚಿಯಾದ ಒಳ್ಳೆಯ ಆರೆಂಜ್ ಪೆಕ್ಕೋ ವೆರೈಟಿಯ ಟೀಯನ್ನು ಆದಿನ ಅವರು ನೀಡಿದ ಆ ಬ್ರಹ್ಮಾಂಡ ಬ್ರೇಕ್‌ಫಾಸ್ಟ್‌ನ ಮೇಲೆ ಸೇವಿಸಿದ್ದೆ! ಅಂತೂ ನಮ್ಮ ಬ್ರೇಕ್‌ಫಾಸ್ಟ್ ಹನ್ನೆರಡೂ ಮುಕ್ಕಾಲಕ್ಕೆ ಕೊನೆಗೊಂಡಿತು!

''ಬನ್ನಿ ನನ್ನ ಲೈಬ್ರರಿ ಕಮ್ ಹೋಂ ಆಫೀಸಿನಲ್ಲಿ ಕೂರೋಣ!'' ಎನ್ನುತ್ತಾ ಅವರ ಆಫೀಸಿಗೆ ಕರೆದೊಯ್ದರು. ಲೆದರ್ ಕವರ್ ಮಾಡಿದ್ದ ಆರಾಮಾಸನದಲ್ಲಿ ನನ್ನನ್ನು ಕುಳ್ಳಿರಿಸಿದರು. ಬಟ್ಲರ್ ಬೆಳ್ಳಿಯ ಟ್ರೇಯಲ್ಲಿ ಸ್ಟೇಟ್ ಎಕ್ಸ್‌ಪ್ರೆಸ್ ಇಂಟರ್‌ನ್ಯಾಷನಲ್ ಸಿಗರೇಟುಗಳು ಮತ್ತು ಬೆಳ್ಳಿಯ ಫ್ಯಾಬರ್ಜೆ ಲೈಟರ್ ತಂದಿರಿಸಿದ. ನಮ್ಮ ಪಕ್ಕಕ್ಕೆ ಚಿಕ್ಕ ಸ್ಟೂಲ್‌ಗಳನ್ನು ತಂದಿರಿಸಿ, ಅದರ ಮೇಲೆ ಆ್ಯಷ್‌ಟ್ರೇಗಳನ್ನು ಇಟ್ಟು ಹೊರಟುಹೋದ. ನಾನು ಸಿಗರೇಟು ಸೇದುವ ವಿಚಾರ ಶರೀಫ್ ಸಾಹೇಬರಿಗೆ ಗೊತ್ತಿತ್ತು. ಆದ್ದರಿಂದ, ನಾನು ಸಂಕೋಚಪಡದೇ (ಅಂದರೆ ಬೇಡಬೇಡ ಎನ್ನದೇ) ಅವರು ಸಿಗರೇಟ್ ನನ್ನ ಮುಂದೆ ಚಾಚಿದಾಗ ತೆಗೆದುಕೊಂಡು ಸೇದಿದೆ. ಬಹುತೇಕ ತರುಣ ಪ್ಲಾಂಟರುಗಳು ಹಿರಿಯ ಪ್ಲಾಂಟರುಗಳ ಎದುರು ಸಿಗರೇಟ್ ಸೇದುವುದಿಲ್ಲ. ಈ ಪರಿಪಾಠ ನಾನೂ ಇಟ್ಟುಕೊಂಡಿದ್ದೆ. ಆದರೆ, ನಾನು ನಮ್ಮ ಆಡಿಟರ್ ಆಫೀಸಿನಲ್ಲಿ ಸಿಗರೇಟ್ ಸೇದುತ್ತಿದ್ದುದನ್ನು ಶರೀಫ್ ಸಾಹೇಬರು ಮೊದಲೇ ಕಂಡಿದ್ದರು. ಆದ್ದರಿಂದ ನನಗೆ ಆ ಬಗ್ಗೆ ಮುಜುಗರ ಅನ್ನಿಸಲಿಲ್ಲ.

ನಾವು ಅದು ಇದು ಮಾತನಾಡುತ್ತಾ, ನಾನು ಹಿಂದಿನ ಕಾಲದ 'ಕಾಫಿ ಪ್ಲಾಂಟಿಂಗ್' ಬಗ್ಗೆ ಅವರ ಅನುಭವದಿಂದ ಬಹಳಷ್ಟು ವಿಚಾರಗಳನ್ನು ಕೇಳಿತಿಳಿದುಕೊಂಡೆ. ತದನಂತರ, ನನ್ನ ಕುತೂಹಲ ತಣಿಸಿಕೊಳ್ಳಲು ''ಸರ್, ತಾವು ಎಷ್ಟೊತ್ತಿಗೆ ಮಧ್ಯಾಹ್ನದ ಊಟ ಮಾಡುತ್ತೀರಿ?'' ಎಂದು ಕೇಳಿದೆ. ಅದಕ್ಕೆ ಅವರು ''ನನಗೆ ಮಧ್ಯಾಹ್ನದ ಊಟದ ಪರಿಪಾಠವೇ ಇಲ್ಲ!'' ಅಂದುಬಿಟ್ಟರು.

''ಈ ದಿನಗಳಲ್ಲೂ ಬೆಳಗ್ಗೆ ನಾಲ್ಕಕ್ಕೇ ಎದ್ದು ನಮಾಜು ಮುಗಿಸಿ, ಐದುಗಂಟೆಗೆ ಮನೆಬಿಟ್ಟರೆ, ಆರು ಗಂಟೆಗೆ ನಮ್ಮ ತೋಟ ಸೇರುತ್ತೇನೆ. ಇಬ್ಬನಿ ಬೀಳುತ್ತಿದ್ದರೂ ಒಂದು ಸುತ್ತು

ನಡೆದು ತೋಟ ಸುತ್ತುತ್ತೇನೆ. ಏಳೂಕಾಲಕ್ಕೆ ಆಳುಗಳ 'ಗೆಣಿತೆ' (ಬೆಳಗಿನ ಹಾಜರಿ) ಮಾಡಿ, ಕೆಲಸಕಾರ್ಯಗಳನ್ನು ಶುರುಮಾಡಿಸುತ್ತೇನೆ. ಆ ನಂತರ ಅಲ್ಲಿಂದ ಹೊರಟು ಸಾಧಾರಣ ಬೆಳಗಿನ ಹತ್ತೂಕಾಲಕ್ಕೆ ಚಿಕ್ಕಮಗಳೂರಿನ ಮನೆ ಸೇರುತ್ತೇನೆ. ನಂತರ ಸ್ನಾನ ಮುಗಿಸಿ ಬೆಳಗಿನ ಹನ್ನೊಂದಕ್ಕೆ ಸರಿಯಾಗಿ ಉಪಹಾರ ಸೇವಿಸುತ್ತೇನೆ. ಲಂಚ್ ಎಂದೂ ತೆಗೆದುಕೊಳ್ಳುವುದಿಲ್ಲ. ಮಧ್ಯೆ ಎಲ್ಲಾದರೂ, ಲಭ್ಯವಿದ್ದರೆ ಒಂದು ಟೀ! ಇಲ್ಲದಿದ್ದರೆ ಏನೂ ಇಲ್ಲ! ರಾತ್ರಿ ಒಂಬತ್ತಕ್ಕೆ ಸರಿಯಾಗಿ ಊಟ. ಹತ್ತಕ್ಕೆ ನಿದ್ರೆ. ಇದು ನನ್ನ ದಿನಚರಿ'' ಎಂದು ವಿವರಿಸಿದರು. ಅವರ 'ಕಷ್ಟಜೀವನ'ವನ್ನು ಕಂಡು ನನಗೆ ಅಚ್ಚರಿಯೆನಿಸಿತು.

ಅವರು ''ಬೆಳಗಿನ ಹನ್ನೊಂದಕ್ಕೆ ತಿಂಡಿ ತಿನ್ನುತ್ತಾರೆ!'' ಎಂಬ ಸಂಗತಿ ಮೊದಲು ನನಗೆ ತಿಳಿದಾಗ, ನನ್ನ ತಲೆಯಲ್ಲಿ ಏನೇನೋ ಕಲ್ಪನೆಗಳು ಮೂಡಿದ್ದುವು. ಶ್ರೀಮಂತರಾದ ಷರೀಫ್ ಸಾಹೇಬರು ಕ್ಲಬ್ ಅಥವಾ ಪಾರ್ಟಿಗಳೆಂದು ರಾತ್ರಿ ಸಮಯ ಕಳೆಯುತ್ತಾ, ಬೆಳಗಿನಜಾವ ಹಾಸಿಗೆ ಸೇರಿ, ಹತ್ತಕ್ಕೆ ಎದ್ದು 'ಬೆಳಗಿನ ಹನ್ನೊಂದಕ್ಕೆ ತಿಂಡಿ ತಿನ್ನುವ ವಿಲಾಸೀ ಶ್ರೀಮಂತ' ಎಂಬ ಅಭಿಪ್ರಾಯ ಮಾಡಿಕೊಂಡಿದ್ದುದಕ್ಕೆ ನನಗೆ ಬಹು ನಾಚಿಕೆ ಎನ್ನಿಸಿತು. ಪಿತೃಸಮಾನ ವ್ಯಕ್ತಿಯಾದ ಅವರ ಬಗ್ಗೆ ಹುಂಬನಂತೆ ಆ ರೀತಿ ಆಲೋಚಿಸಿದುದಕ್ಕೆ ಅವರ ಕ್ಷಮಾಪಣೆಯನ್ನು ಬೇಡಿದೆ. ಅದಕ್ಕೆ ಅವರು ನಗುತ್ತಾ ''ಅದೊಂದು ಮ್ಯೂಚುವಲ್ ಫೀಲಿಂಗ್ ಆಗಿತ್ತು!'' ಎಂದರು. ನಾನು ''ಅದು ಹೇಗೆ ಸರ್?'' ಎಂದೆ.

''ನಾನು ಕೂಡ ನಿಮ್ಮನ್ನು ಮೇಲ್ನೋಟದಿಂದ ತಪ್ಪು ತಿಳಿದಿದ್ದೆ! ನಿಮ್ಮ ಜೀನ್ಸ್‌ಪ್ಯಾಂಟ್, ಫ್ಯಾನ್ಸಿಹ್ಯಾಟ್‌ಗಳು, ಫ್ರೆಂಚ್‌ಗಡ್ಡ, ಲೇಟೆಸ್ಟ್ ಮಾರುತಿ ಜಿಪ್ಸಿ ಜೀಪ್, ಘಟ್ಟಿಯಾಗಿ ಕಿರುಚುವ ನಿಮ್ಮ ಕಾರಿನ ಮ್ಯೂಸಿಕ್‌ಸಿಸ್ಟಮ್ ಇವನ್ನೆಲ್ಲಾ ನೋಡಿ, ನಿಮ್ಮನ್ನು 'ಒಬ್ಬ ಶೋಕಿಯ ಬೆಂಗಳೂರುವಾಸಿ ಹುಡುಗ' ಎಂದು ತಿಳಿದಿದ್ದೆ. ನಿಮ್ಮ ಆಡಿಟರ್ ಮುಖಾಂತರ ನಿಮ್ಮ ಬಗ್ಗೆ ಹೆಚ್ಚಿನ ವಿಚಾರಗಳು ತಿಳಿದುವು. ನೀವು ಬೆಂಗಳೂರಿನಲ್ಲಿ ಮನೆ ಮಾಡಿದ್ದರೂ, ಶುಕ್ರವಾರ ಸಾಯಂಕಾಲ ಸಂಸಾರ ಸಮೇತ ಹೊರಟು, ರಾತ್ರಿಯೆಲ್ಲಾ ಡ್ರೈವ್‌ಮಾಡಿ ತೋಟ ಸೇರಿ, ಕೆಲಸಕಾರ್ಯ ಗಮನಿಸುತ್ತೀರಿ. ಭಾನುವಾರ ರಾತ್ರಿ ಎರಡು ಗಂಟೆಗೆ ಹೊರಟು, ಮುನ್ನೂರ ನಾಲ್ವತ್ತು ಕಿಲೋಮೀಟರ್ ಡ್ರೈವ್‌ಮಾಡಿ ಸೋಮವಾರ ಬೆಳಗ್ಗೆ ಎಂಟಕ್ಕೆ ಮಕ್ಕಳನ್ನು ಹೇಗೆ ಶಾಲೆಗೆ ಕಳುಹಿಸುತ್ತೀರಿ, ಎಂಬ ವಿಚಾರ ನನಗೆ ಅವರಿಂದ ತಿಳಿಯಿತು. ಸ್ಪ್ರಿಂಕ್ಲರ್ ಇರಿಗೇಶನ್, ರಾಸಾಯನಿಕ ಸ್ಪ್ರೇ ಮತ್ತು ಗೊಬ್ಬರ ಹಾಕುವಿಕೆಯಲ್ಲಿ ನಿಮಗಿರುವ ಅನುಭವ, ತೋಟದ ಆಳುಗಳ ಮತ್ತು ನೌಕರರ ಮೇಲಿನ ಕರುಣೆ ಹಾಗೂ ಅವರ ಮೇಲಿನ ಹಿಡಿತ, ಇವುಗಳ ಬಗ್ಗೆ ಕೂಡಾ ನಮ್ಮ ಆಡಿಟರ್ ನನಗೆ ತಿಳಿಸಿ ಹೇಳಿದರು. ಕೆಲವು ಸಲ 'ಮೇಲ್ನೋಟದ ಅಭಿಪ್ರಾಯ ನಿಜವಲ್ಲ' ಎಂದು ಸೂಕ್ಷ್ಮವಾಗಿ ನಾವು ಪರಿಶೀಲಿಸಿದಾಗ ಮಾತ್ರ ಗೊತ್ತಾಗುತ್ತದೆ! ಮೇಲ್ನೋಟಕ್ಕೆ ನಾವಿಬ್ಬರೂ ಇತರರಿಗೆ ವಿಚಿತ್ರ ವ್ಯಕ್ತಿಗಳಾಗಿ ಕಂಡುಬರುತ್ತೇವೆ. ವಾಸ್ತವದಲ್ಲಿ ನಾವಿಬ್ಬರೂ ಕಷ್ಟಪಟ್ಟು ಬದುಕುವ ಪ್ಲಾಂಟರುಗಳು. ಅದಕ್ಕೇ ನಾವಿಬ್ಬರು ವಯಸ್ಸಿನ ಅಂತರವಿದ್ದರೂ ಒಳ್ಳೆಯ ಸ್ನೇಹಿತರು'' ಎಂದರು.

ಸುಮಾರು ಒಂದು ಗಂಟೆಯ ಸಮಯಕ್ಕೆ ನಾನು ಷರೀಫ್ ಸಾಹೇಬರಿಗೆ ಧನ್ಯವಾದ


ಅರ್ಪಿಸುತ್ತಾ ಹೊರಡಲು ಎದ್ದೆ. ಹೊರಗಿನ ಹಜಾರಕ್ಕೆ ಬಂದು ನೋಡುತ್ತೇನೆ! ನನ್ನ ಬೂಟುಗಳು ಪಾಲಿಷ್ ಆಗಿ ಕನ್ನಡಿಯಂತೆ ಹೊಳೆಯುತ್ತಿವೆ.

"ನನ್ನ ಬೂಟುಗಳ ಜತೆಗೆ ನಿಮ್ಮ ಬೂಟುಗಳನ್ನೂ ನಮ್ಮ ಚೋಕ್ರಾ ಪಾಲಿಶ್ ಮಾಡಿದ್ದಾನೆ!" ಎಂದರು ಶರೀಫ್ ಸಾಹೇಬರು ನಗುತ್ತಾ!

ಅವರ ಬಂಗಲೆಯ ಪೋರ್ಟಿಕೋದಲ್ಲಿ ನನ್ನ ಜೀಪ್ ವ್ಯಾಕ್ಸ್ ಪಾಲಿಶ್ ಹಾಕಿಸಿಕೊಂಡು ಹೊಳೆಯುತ್ತಾ ನಿಂತಿತ್ತು. "ಸರ್! ತಮ್ಮ ವಾಹನಗಳ ಜತೆಗೆ ಇಂದು ನನ್ನ ಜೀಪಿಗೂ ಸ್ನಾನ ಮತ್ತು ಪಾಲಿಶ್ ಆಗಿದೆ!" ಎನ್ನುತ್ತಾ ಶ್ರೀಮಾನ್ ಶರೀಫ್ ಸಾಹೇಬರಿಗೆ ವಂದನೆ ಹೇಳಿ ನನ್ನ ಜೀಪ್ ಹತ್ತಿದೆ.

"ನನಗೆ ಒಬ್ಬ ಬಕಾಸುರಿನಿಗೆ ತಿನ್ನಿಸುವಷ್ಟು ಉಪಹಾರ ತಿನ್ನಿಸಿ, ತಾನು ಮಾತ್ರ ಒಂದು ರೊಟ್ಟಿ ಮತ್ತು ನಾಲ್ಕು ಚೂರು ಪಪ್ಪಾಯಿ ಹಣ್ಣು ತಿಂದಿದ್ದರು. ನನಗೋಸ್ಕರ ಅವರು ಅಷ್ಟು ಅದ್ದೂರಿಯ ಉಪಚಾರ ಯಾಕೆ ಮಾಡಬೇಕಿತ್ತು?" ಎಂದು ವಿಸ್ಮಯಪಟ್ಟೆ. "ಇದು ಅವರ ಸ್ವಭಾವ ಮತ್ತು ದೊಡ್ಡ ಗುಣ" ಎಂದು ನಾನು ಹಲವರಿಂದ ಕೇಳಿದ್ದೆ.

ವಾಪಸ್ ಹೊರಡುತ್ತಾ "ಶರೀಫ್ ಸಾಹೇಬರ ಶಿಸ್ತು ಮತ್ತು ಕ್ರಮ ಅಳವಡಿಸಿಕೊಂಡರೆ ಬದುಕು ಎಷ್ಟು ಚೆನ್ನ!" ಅಂದುಕೊಂಡೆ. ಆದರೆ, "ಈ ಜನ್ಮದಲ್ಲಿ ನನ್ನಿಂದ ಶರೀಫ್ ಸಾಹೇಬರ ಶಿಸ್ತು ಮತ್ತು ಅತಿಥಿ ಸತ್ಕಾರಗಳನ್ನು ಅನುಕರಿಸಲು ಸಾಧ್ಯವೇ ಇಲ್ಲ!" ಎಂದು ಅನಿಸಿತು.



ಕುಸ್ತಿಗೆ ಪ್ರೀತಿಯೊಂದೇ ಸಾಲದೆ?

- ಎನ್. ಪ್ರಕಾಶ್

ಜ್ಞಾನೋದಯದ ಬಳಿಕ ನನಗೆ ಸಿಕ್ಕವನೇ ಶಿವಣ್ಣ. ನನ್ನ ತಲೆಯ ಹಿಂದಿದ್ದ ಜ್ಞಾನದ ಪ್ರಭಾವಳಿಯನ್ನು ಯಾರು ಕಾಣದೇ ಹೋದರೂ, ಅದನ್ನು ನಿಚ್ಚಳವಾಗಿ ಕಂಡವನು ಶಿವಣ್ಣ ಮಾತ್ರ. ದೇವರು ಕೇವಲ ಹೊಡೆಯುವ ಹುಡುಗರನ್ನಷ್ಟು ಕಳಿಸುವುದಿಲ್ಲ. ಪ್ರೀತಿಯ ಗೆಳೆಯರನ್ನೂ ಕರುಣಿಸುತ್ತಾನೆ ಎಂಬುದಕ್ಕೆ ಶಿವಣ್ಣನೇ ಸಾಕ್ಷಿ. ಈ ಶಿವಣ್ಣ ಬಡಗಿಯೊಬ್ಬರ ಮಗ. ನನ್ನ ಹಾಗೇ ಬಡಕಲು ಶರೀರ. ಅದರೊಳಗೆ ಅಷ್ಟೊಂದು ಕಸುವು ತುಂಬಿಕೊಂಡಿರುತ್ತಿತ್ತೆಂದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಅವನೂ ನನ್ನ ಜೊತೆಗೆ ಐದನೆಯ ಕ್ಲಾಸಿನಲ್ಲಿ ಓದುತ್ತಿದ್ದ.

ಒಂದು ದಿನ ಸಂಜೆ ಶಾಲೆ ಬಿಟ್ಟ ಮೇಲೆ, 'ಸ್ವಲ್ಪ ಇರು, ಓಡಿ ಹೋಗಬೇಡ, ನನ್ನ ಜೊತೆಗೆ ಬಾ' ಎಂದ. ಅವನೊಂದಿಗೆ ಹೋದೆ. ಸ್ವಲ್ಪ ದೂರದಲ್ಲಿ ಕಟ್ಟುತ್ತಿದ್ದ ಒಂದು ಕಟ್ಟಡದ ಪಕ್ಕದಲ್ಲಿ ಮರಳ ರಾಶಿ ಇತ್ತು. ಅಲ್ಲಿಗೆ ಕರೆದೊಯ್ದು, ಪುಸ್ತಕದ ಚೀಲಗಳನ್ನು ಬದಿಗಿಟ್ಟು ಅದೂ ಇದೂ ಮಾತಾಡುತ್ತಾ ಕುಳಿತುಕೊಂಡೆವು. ಅವನು ತನ್ನ ಚೀಲದಿಂದ ಒಂದಡಿ ಉದ್ದವಿದ್ದ ಒಂದು ಮರದ ಪಟ್ಟಿ ತೆಗೆದು ತೋರಿಸಿದ. ಅದು ಬಿಳುಪಾಗಿ, ನುಣುಪಾಗಿ ಇತ್ತು. ಒಂದು ಸ್ಕೇಲಿನಂತೆ ಇದ್ದರೂ ಅದರಲ್ಲಿ ಇಂಚು, ಸೆಂಟಿಮೀಟರ್ ಏನೂ ಇರಲಿಲ್ಲ. ಬರೀ ಬೋಳು ಸ್ಕೇಲು. ಆದರೆ ತುಂಬಾ ಚೆನ್ನಾಗಿ ನೋಡಿದ ಕೂಡಲೇ ಬೇಕೆನಿಸುವಂತಿತ್ತು. ಆ ಕ್ಷಣದಲ್ಲಿ ಅದಕ್ಕಿಂತ ಸುಂದರ ವಸ್ತು ಬೇರೆ ಯಾವುದೂ ಇಲ್ಲ ಅನ್ನಿಸಿತು. 'ತುಂಬಾ ಚೆನ್ನಾಗಿದೆ' ಎಂದೆ. 'ನಿನಗೆ ಅಂತಾನೇ ತಂದೆ. ಇಟ್ಕೊ' ಅಂದ. ನನಗೆ ನಂಬಲೂ ಆಗಲಿಲ್ಲ. ಯಾರಾದರೂ ಅಷ್ಟು ಚೆನ್ನಾಗಿರುವ ವಸ್ತು ಕೊಡುತ್ತಾರೆಯೆ? ಅವನು ಬಲವಂತ ಮಾಡಿ ಅದನ್ನು ನನ್ನ ಕೈಗಿತ್ತ. ಅದರ ಮೇಲೆ ಕೈಯಾಡಿಸಿ, ಮುಖಕ್ಕೆ, ಮೈಗೆ ಅದನ್ನು ಸವರಿಕೊಂಡು. ಅದರ ನುಣುಪನ್ನು ಅನುಭವಿಸಿ ಸಂತೋಷಪಟ್ಟೆ. ಆ ಸ್ಕೇಲನ್ನು ತೆಗೆದು ಅವನೇ ನನ್ನ ಚೀಲದಲ್ಲಿಟ್ಟು, ಇಬ್ಬರ ಚೀಲಗಳನ್ನೂ ಅವನೇ ದೂರ ತೆಗೆದಿಟ್ಟ. 'ಈಗ ಅಂಗಿ ಬಿಚ್ಚು, ಇಬ್ಬರೂ ಕುಸ್ತಿ ಆಡೋಣ. ಇಲ್ಲಾದರೆ ಯಾರಿಗೂ ಗಾಯವಾಗುವುದಿಲ್ಲ' ಎಂದ. ನನಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿಯಿತು. ಹೀಗೆ ಮತ್ತೆ ಶುರುವಾಯಿತು ನನ್ನ ಕುಸ್ತಿ ಆಟ.

ಈ ಶಿವಣ್ಣನ ಕುಸ್ತಿಯ ರೀತಿಯೇ ಬೇರೆ. ಅಲ್ಲಿಯವರೆಗೆ ನನಗೆ ಕುಸ್ತಿ ಎಂದರೆ ಒಂದು ಯುದ್ಧ. ಕುಸ್ತಿಗೆ ಮುಂಚೆ ಶತ್ರುತ್ವ ಇರುತ್ತಿರಲಿಲ್ಲ. ಕುಸ್ತಿಯ ನಂತರ ರೋಷ, ದ್ವೇಷ ಇರುತ್ತಿರಲಿಲ್ಲ ಎನ್ನುವುದೇನೋ ನಿಜ. ಆದರೆ ಕುಸ್ತಿಗೆ ತೊಡಗಿದಾಗ ಮಾತ್ರ ಕಣ್ಣಿನ ತುಂಬಾ ಕಿಡಿಗಳು, ಮನಸ್ಸಿನಲ್ಲಿ ಛಲ, ಹಟ, ಅಹಂಕಾರಗಳು. ಆದರೆ ಈ ಶಿವಣ್ಣನ ಹತ್ತಿರ ಮಾತ್ರ ಹಾಗೆ ಆಗುತ್ತಿರಲಿಲ್ಲ. ಕುಸ್ತಿ ಆಡುವಾಗಲೂ ಅವನದು ಮುಗುಳ್ನಗೆ. ಮೇಲೇರಿ ಬಂದಾಗಲೂ ಅಷ್ಟೆ. ಹುಲಿ, ಸಿಂಹದ ಹಾಗೆ ಜಿಗಿಯುತ್ತಿರಲಿಲ್ಲ. ಹಕ್ಕಿಯ ಹಾಗೆ ಹಗುರವಾಗಿ ಹಾರಿ ಬರುತ್ತಿದ್ದ.

ನಾನು ಜೋರಾಗಿ ಮೇಲೇರಿ ಹೋದರೂ ಅಷ್ಟೆ ಯಾವುದೋ ಮಾಯದಲ್ಲಿ ಸರ್‍ರಂತ ನನ್ನ ಬೆನ್ನ ಹಿಂದೆ ಸರಿದು, ಹಿಂದಿನಿಂದ ಬಿಗಿಯಾಗಿ ಹಿಡಿದು, ನನ್ನ ಕಾಲಿಗೆ, ಹಿಮ್ಮಡಿಯ ಹತ್ತಿರ, ಬಿದ್ದು ಸಮತೋಲ ತಪ್ಪಿ ನಾನು ಅವನ ಮೈಮೇಲೆ ಬೀಳುವಂತೆ ಮಾಡುತ್ತಿದ್ದ. ಆದರೆ ಅವನು ಮಾತ್ರ ಬಿಗಿಯಾಗಿಯೇ ನಿಂತಿರುತ್ತಿದ್ದುದರಿಂದ, ಕೆಳಗೆ ಬೀಳುತ್ತಿರಲಿಲ್ಲ. ಅನಾಮತ್ತಾಗಿ ಅವನಿಗೆ ಒರಗಿ ಕುಳಿತುಕೊಳ್ಳುವಂತೆ ಮಾಡಿ, ಸರ್‍ರನೆ ಪಕ್ಕಕ್ಕೆ ಸರಿದು, ನೆಲದ ಮೇಲೆ ನನ್ನನ್ನು ಅಂಗಾತ ಮಲಗಿಸಿ, ಕುಸ್ತಿ ಗೆದ್ದೇ ಬಿಡುತ್ತಿದ್ದ. ಮುಗುಳ್ನಗುತ್ತಲೇ ನನ್ನ ಕೈ ಹಿಡಿದೆಬ್ಬಿಸಿ, ಬೆನ್ನು ತಟ್ಟಿ ಮತ್ತೆ ಇನ್ನೊಂದು ಸುತ್ತು ಕುಸ್ತಿ ಆರಂಭಿಸುತ್ತಿದ್ದ. ಗೆದ್ದೆನೆಂಬ ಅಹಂಕಾರ ಹತ್ತಿರ ಸುಳಿಯಲೂ ಪುರುಸೊತ್ತು ಕೊಡುತ್ತಿರಲಿಲ್ಲ. ನಾನು ಸೋತೆನೆಂದು ಅರಿವಾಗುವಷ್ಟರಲ್ಲೇ ಮತ್ತೆ ಕುಸ್ತಿ ಶುರುವಾಗಿರುತ್ತಿತ್ತು. ಅವನೇನಾದರೂ ಕೆಳಗೆ ಬೀಳುವಂತಾದರೆ, ಬೆನ್ನು ಮೇಲೆ ಮಾಡಿ ಬೀಳುತ್ತಿದ್ದ. ಪ್ರೀತಿಯಿಂದ ನೆಲಕ್ಕೆ ಕಚ್ಚಿಕೊಂಡವನಂತೆ, ಬೋರಲಾಗಿ ಮಲಗಿ ಬಿಡುತ್ತಿದ್ದ. ಏನು ತಿಣುಕಾಡಿದರೂ, ಎಷ್ಟೇ ತಿಪ್ಪರಲಾಗ ಹಾಕಿದರೂ, ಅವನು ಹೊರಳುತ್ತಿರಲಿಲ್ಲ, ಅವನು ಬೆನ್ನು ನೆಲಕ್ಕೆ ಹಾಕುತ್ತಿರಲಿಲ್ಲ. ನಾನೇ ಬಸವಳಿದು ಸಾಕಾಗಿ, ಅವನನ್ನು ಬಿಟ್ಟೆದ್ದು ನಿಲ್ಲುತ್ತಿದ್ದೆ. ಕುಸ್ತಿ 'ಡ್ರಾ' ಆಗುತ್ತಿತ್ತು. ಫಲಿತಾಂಶವೇನಾದರೂ ಆಗಲಿ, ಕುಸ್ತಿಯ ನಂತರದ ಗೆಲುವಿನ ಅಹಂಕಾರವಾಗಲೀ, ಸೋಲಿನ ಅವಮಾನವಾಗಲೀ ಹತ್ತಿರ ಸುಳಿಯುತ್ತಿರಲಿಲ್ಲ. ಜೊತೆಗೆ ಕುಸ್ತಿಯ ನಂತರದ ಸುಸ್ತೂ ಇರುತ್ತಿರಲಿಲ್ಲ. ಕೇವಲ ಕುಸ್ತಿ ಆಡಿದ ಆನಂದದಿಂದ ಮನೆಗೆ ಮರಳುತ್ತಿದ್ದೆವು.

ಈ ಕುಸ್ತಿ ಪೂರಾ ಹೊಸ ಬಗೆಯದು. ಕುಸ್ತಿಗೆ ಸಂಪೂರ್ಣ ಸಾಮರ್ಥ್ಯ ಬಳಸೋಣ. ಆ ಸಾಮರ್ಥ್ಯದಲ್ಲಿ ಕಿಂಚಿತ್ ಭಾಗವೂ ರೋಷಕ್ಕಾಗಲೀ, ದ್ವೇಷಕ್ಕಾಗಲೀ, ಹಟಕ್ಕಾಗಲೀ ವ್ಯಯವಾಗುವುದು ಬೇಡ. ಕುಸ್ತಿ ಎಂದರೆ ಶಕ್ತಿ ಪ್ರದರ್ಶನವಲ್ಲ, ಅಹಂಕಾರದ ಅಭಿವ್ಯಕ್ತಿಯಲ್ಲ ಅದು ಕೇವಲ ದೈಹಿಕ ಆಟವಲ್ಲ, ಮನಸ್ಸನ್ನು ಅರಳಿಸುವ ಸುಂದರ ಕಲೆ ಎಂಬುದನ್ನು ಅವನೊಂದಿಗೆ ಕುಸ್ತಿಯಿಂದ ಕಲಿತೆ.


'ಕುಸ್ತಿಗೆ ಪ್ರೀತಿಯೊಂದೇ ಸಾಲದೆ?' ಎಂದು ಇಂದೂ ಅವನು ನನ್ನ ಕಿವಿಯಲ್ಲಿ ಪ್ರೀತಿಯಿಂದ ಉಸುರುತ್ತಿದ್ದಾನೇನೋ ಅನ್ನಿಸುತ್ತದೆ.

❋

ಅದೇ ಹೆಸರು

ಮುಂಬೈನಲ್ಲಿ ಸಚಿನ್ ಟೆಂಡುಲ್ಕರ್ ಹೆಸರಿನ ಒಂದು ಹೋಟೆಲ್ ಆರಂಭವಾದ ಮೇಲೆ ಅವರ ಮಗಳು ಓದುತ್ತಿದ್ದ ತರಗತಿಯಲ್ಲಿ ಟೀಚರ್ "ನೋಡಿ ಮಕ್ಕಳೇ, ಮುಂಬೈನಲ್ಲಿ ಒಂದು ಹೋಟೆಲ್ ಇದೆ. ಅದರ ಹೆಸರು ಸಚಿನ್." ಎಂದರು.

"ಮಿಸ್, ನಮ್ಮ ತಂದೆ ಹೆಸರೂ ಸಚಿನ್" ಎಂದಳು ಸಾರಾ, ಅವರ ಮಗಳು!



ಎಂಥಾ ಕಾಲವಯ್ಯಾ....

- ಸಿ.ಆರ್. ಸತ್ಯ

ಆಗಿನ್ನೂ ಕಲಿಯುಗ ಶುರುವಾಗಿತ್ತು ಅಷ್ಟೆ. ಕೆಂಪಾಂಬುದಿ ಕೆರೆ ಇದ್ದಲ್ಲಿ, ಸುಭಾಷ್‌ನಗರ ಮೈದಾನದಲ್ಲಿ, ಕಂಠೀರವ ಸ್ಟೇಡಿಯಮ್ ಇದ್ದ ಜಾಗಗಳಲ್ಲಿ ನಿಜವಾಗಲೂ ನೀರು ಇತ್ತು. ಬೆಂಗಳೂರಿನ ತುಂಬಾ ಸರ್ಕಲ್‌ಗಳು ಇದ್ದವು. ಕೆಲವು ಸರ್ಕಲ್‌ಗಳ ಒಳಗೆ ನಿಜವಾದ ಹೂವುಗಳೂ ಬಿಟ್ಟಿರೋವು!

ಆಗ, ವಿಶ್ವೇಶ್ವರ ಪುರದಲ್ಲಿದ್ದ ಶೆಟ್ಟರು ಬಹಳ ಹಣವಂತರು ಅಂತ ಪ್ರತೀತಿ. ಯಾಕೆ ಗೊತ್ತೇ? ಬೆಂಗಳೂರಿಗೆ ಬಂದ ಪ್ರಪ್ರಥಮ ಸ್ಕೂಟರ್ - ವೆಸ್ಪಾ, ಲ್ಯಾಂಬ್ರೆಟಾ, ಪ್ರಪ್ರಥಮ ಇಂಪೋರ್ಟ್ಡ್ ರೋಲ್ಡ್‌ಗೋಲ್ಡ್ ಗಡಿಯಾರ, ಫಿಯಟ್ ಕಾರ್ ಇವೆಲ್ಲಾ ನಾವು ನೋಡ್ತಾ ಇದ್ದಿದ್ದು ವಿಶ್ವೇಶ್ವರಪುರದಲ್ಲೇ.

ಆಗ ಕರ್ನಾಟಕಕ್ಕೆ ಸರ್ಕಾರ ಇತ್ತೋ ಇಲ್ಲವೋ ಗೊತ್ತಿಲ್ಲ. ಸರ್ಕಾರ ಬಂದದ್ದು ಕೆಂಗಲ್ ಹನುಮಂತಯ್ಯನವರು ವಿಧಾನಸೌಧ ಕಟ್ಟಿದ ಮೇಲೆ. ಆಮೇಲೆ ಇಲಾಖೆಗಳು, ಕಾರ್ಯದರ್ಶಿಗಳು, ಅಂಬಾಸಿಡರ್ ಕಾರ್‌ಗಳು ಅಂತ ನಾವೆಲ್ಲಾ ಕೇಳಿದ್ದು. ಸರ್ಕಾರ ಅಂದ ಮೇಲೆ ಜ್ಞಾಪಕ ಬಂತು ನೋಡಿ, ಸರ್ಕಾರದ ಪಾಡಿಗೆ ಸರ್ಕಾರ ಇತ್ತು-ದೇವರ ಪಾಡಿಗೆ ದೇವರು ಇದ್ದ. ಆ ಕೆಂಗಲ್ ಸಾಹೇಬ್ರು ವಿಧಾನಸೌಧದ ಮೇಲೆ ಸರ್ಕಾರದ ಕೆಲಸ ದೇವರ ಕೆಲಸ ಅಂತ ಕೆತ್ತಿಸಿ ಬಿಟ್ರು ನೋಡಿ, ಆವಾಗಿನಿಂದ ಮುಖ್ಯಮಂತ್ರಿಗಳ ಕೆಲಸದಲ್ಲಿ - ಸರ್ಕಾರದ ಸಮಯದಲ್ಲಿ - ಸರ್ಕಾರದ ಹಣದಲ್ಲಿ ಪೂಜೆ, ಪುನಸ್ಕಾರ, ಅಭಿಷೇಕಗಳನ್ನು ಮಾಡಿ ಮಠಗಳಿಗೆ ಕೋಟ್ಯಾಂತರ ರೂಪಾಯಿ ಕೊಡೋದು ವಾಡಿಕೆಯಾಯಿತು.

ಆವಾಗ ಬೆಂಗಳೂರಿಗೆ ಕಾರ್ಪೋರೇಶನ್ ಇತ್ತು. ಆದರೆ ಈಗಿನಷ್ಟು ಒತ್ತಡವ ಕೆಲಸಗಳಿರಲಿಲ್ಲ ಬಿಡಿ. ದೊಡ್ಡ ಜವಾಬ್ದಾರಿಗಳೆಂದರೆ: ಕಾರ್ಪೋರೇಶನ್ ಹೆರಿಗೆ ಆಸ್ಪತ್ರೆಗಳನ್ನು ನಡೆಸೋದು. ಇದ್ದಿದ್ದ ಹತ್ತು ರಸ್ತೆಗಳನ್ನು, ಚರಂಡಿಗಳನ್ನು ಗುಡಿಸೋದು, ಸೈಕಲ್‌ಗಳಿಗೆ ಬಿಲ್ಲೆಲೈಸನ್ಸ್ ಮಾರೋದು ಅಷ್ಟೆ. ಗೋಡೆಕಟ್ಟಿ ಬೀಳಿಸೋದು, ಚರಂಡಿ ಕಟ್ಟಿ ಪಾದಚಾರಿಗಳನ್ನು ಮುಳುಗಿಸೋದು, ಮರ ಕಡಿದು 'ಹಸಿರು ಬೆಂಗಳೂರು' ಅಂತ ಬೋರ್ಡ್ ಹಾಕೋದು... ಇಂತಹ ತಂತ್ರಜ್ಞಾನಗಳು ಇನ್ನೂ ಕಾರ್ಪೋರೇಶನ್‌ಗೆ ತಿಳಿದಿರಲಿಲ್ಲ.

ಆಗ ಪೋಲಿಸರು ಪೆದ್ದರಾಗಿದ್ದರು, ಜನರೂ ಪೆದ್ದರಾಗಿದ್ದರು. ಸಂಜೆ ಆರು ಘಂಟೆ ಆದರೆ ಸಾಕು, ಲೈಟ್ ಇಲ್ಲದ ಸೈಕಲ್‌ಗಳನ್ನು ಹಿಡಿಯೋರು. ಹಾಲ್ಟ್ ಆ್ಯಂಡ್ ಪ್ರೊಸೀಡ್ ಬೋರ್ಡ್ ಹತ್ತಿರ ಜನ ನಿಜವಾಗ್ಲೂ ವಾಹನಗಳನ್ನು ನಿಲ್ಲಿಸೇಬಿಡೋರು ಅಂದ್ರೆ ನಂಬ್ತಿರಾ? ಸೈಕಲ್ ಮೇಲೆ ಡಬ್ಬಲ್ ರೈಡ್ ಮಾಡಿದ್ರೂ ಹಿಡಿ! ಈಗಿನ ಹಾಗೆ ಶ್ರೀಗಂಧ ತುಂಬಿಕೊಂಡು ಎಲ್ಲೂ ನಿಲ್ಲಿಸದೇ

ಹೋಗೋ ಲಾರಿಗಳು, ಅಮಲೇರಿದ ಡ್ರೈವರ್ ಚಾಲಿತ ಬೆಂಜ್‌ಕಾರುಗಳು, ವೇಗ ಮಿತಿಯನ್ನು ಮೀರಿ ಒನ್‌ವೇನಲ್ಲಿ ಹೋಗಿ ಪಾದಚಾರಿಗಳನ್ನು ಕೊಲ್ಲೋದು - ಇವೆಲ್ಲಾ ನಾವು ನೋಡ್ತಾ ಇದ್ದಿದ್ದು ಸಿನಿಮಾದಲ್ಲೇ!

ಆಗ 'ಅವಸರ' ಅನ್ನೋ ಪದ ಕನ್ನಡ ಭಾಷೆಯಲ್ಲೇ ಇರಲಿಲ್ಲ. ಇತ್ತೀಚೆಗೆ ತಾನೆ ಕನ್ನಡ ಸಾಹಿತ್ಯ ಪರಿಷತ್ತು, ಈ ಪದವನ್ನು ಅಧಿಕೃತವಾಗಿ ಭಾಷೆಗೆ ಸೇರಿಸಿದ್ದು? ಸ್ಕೂಲುಗಳು, ಕಾಲೇಜುಗಳು, ಆಫೀಸುಗಳು ಚಟುವಟಿಕೆಗೆ ಬರೋದು ಬೆಳಗ್ಗೆ ಹತ್ತು ಘಂಟೆಯ ಮೇಲೆ. ಏನಾದ್ರು ತುರ್ತು ಪರಿಸ್ಥಿತಿ ಆಗಲಿ, ಎಲ್ಲಾದರೂ ಬೆಂಕಿ ಹತ್ತಲಿ, ಎಲ್ಲಾದರೂ ಯಾರಾದರೂ ಕಾಲು ಮುರಿದುಕೊಳ್ಳಲಿ, ಯಾರಾದ್ರೂ ಸಾಯಲಿ ಎಲ್ಲಾ ಹತ್ತು ಘಂಟೆ ಮೇಲೆ ಸಂಜೆ ಐದು ಐದೂವರೆ ಒಳಗೆ ಆಗೋದು. ಎಷ್ಟೇ ಅರ್ಜೆಂಟ್ ಕೆಲಸ ಇದ್ದರೂ ಬೈಟು ಕಾಫಿ ಕುಡಿಯೋಕ್ಕೆ ಮಾತ್ರ ಎಷ್ಟು ಬೇಕಾದರೂ ಸಮಯ ಸಿಗೋದು.

ಬೆಂಗಳೂರಿನಿಂದ ಮೈಸೂರಿಗೆ ಫೋನ್ ಮಾಡಬೇಕಾದರೆ ದೊಡ್ಡ ಪೋಸ್ಟ್ ಆಫೀಸಿನಲ್ಲಿ ''ಟ್ರಂಕ್ ಕಾಲ್'' ಅಂತ ಬುಕ್ ಮಾಡಬೇಕು. ಅರ್ಧ ದಿನ ಆದ ಮೇಲೆ ನಿಮ್ಮ ಸರದಿ ಬಂದು ಅದೃಷ್ಟವಿದ್ದು ಲೈನ್ ಸರಿಯಾಗಿದ್ದರೆ ಸಂಜೆ ವೇಳೆಗೆ ಮಾತನಾಡಬಹುದಿತ್ತು. ಒಂದು ಸಲ ಒಬ್ಬಾತ ಬಸವನಗುಡಿ ಪೋಸ್ಟ್ ಆಫೀಸಿಗೆ ಬಂದು ಮೈಸೂರಿನ ಆಸ್ಪತ್ರೆಯೊಂದರ ನಂಬರ್‌ಗೆ ಟ್ರಂಕ್ ಬುಕ್ಕಿಂಗ್ ಮಾಡಿದರು. ಆಗ ಬೆಳಗ್ಗೆ ಹತ್ತು ಘಂಟೆ. ನಮ್ಮ ಚಿಕ್ಕಪ್ಪ ಆಸ್ಪತ್ರೆಯಲ್ಲಿ ಈಗಲೋ ಆಗಲೋ ಸಾಯೋ ಹಾಗಿದ್ದಾರೆ; ಸ್ವಲ್ಪ ಬೇಗ ಕನೆಕ್ಟ್ ಮಾಡಿ ಅಂತ ಬೇಡಿಕೊಂಡರು. ಪೋಸ್ಟ್‌ಮಾಸ್ಟರು ಯೋಚನೆ ಮಾಡಬೇಡಿ ಸಂಜೆ ನಾಲ್ಕು ಘಂಟೆಗೆಲ್ಲಾ ನಿಮಗೆ ಕಾಲ್ ಸಿಗುತ್ತೆ ಅಂತ ಭರವಸೆ ನೀಡಿದರು. ಸರಿ, ನಾಲ್ಕು ಘಂಟೆಗೆ ಆತ ಬಂದ್ರು; ಆದರೆ ''ಕಾಲ್ ಕ್ಯಾನ್ಸಲ್ ಮಾಡಿ'' ಅಂದರು. ''ಯಾಕೆ?'' ಅಂದರು ಪೋಸ್ಟ್‌ಮಾಸ್ಟರು. ''ಏನಿಲ್ಲ, ಮೈಸೂರಿಗೆ ತಕ್ಷಣ ಬಸ್ ಸಿಕ್ತು. ನಾನೇ ಖುದ್ದಾಗಿ ಹೋಗಿ ಬಂದೆ. ಪಾಪ ನನ್ನ ತೊಡೆ ಮೇಲೆ ಪ್ರಾಣ ಬಿಟ್ಟರು ನಮ್ಮ ಚಿಕ್ಕಪ್ಪ. ಇನ್ನು ಯಾರ ಜೊತೆ ನಾನು ಮಾತನಾಡೋದಿದೆ?'' ಅಂತ ಕಣ್ಣಲ್ಲಿ ನೀರು ಹಾಕಿಕೊಂಡರು.

ಊರಿಂದೂರಿಗೆ ಹೋಗುವ ಬಸ್ ನಿಲ್ದಾಣಕ್ಕೆ ನೀವು ಎಷ್ಟು ತಡವಾಗಿಯಾದ್ರೂ ಹೋಗಿ, ಬಸ್ಸು ನಿಮಗೇ ಕಾಯುತ್ತಿದ್ದ ಕಾಲ ಅದು. ಯಾವ ಆತಂಕವೂ ಇಲ್ಲದೆ ನೀವು ಬಸ್ ಏರಿ ಕುಳಿತ ನಂತರವೂ ಕಂಡಕ್ಟರ್ ಮತ್ತು ಡ್ರೈವರ್ ಯಥಾಸ್ಥಿತಿಯೇ, ''ಇನ್ಯಾರ್ರೀ ಶಿಡ್ಲಘಟ್ಟ? ಬೇಗ ಬನ್ನಿ ಬೇಗ ಬನ್ನಿ'' ಅಂತ ಆವಾಗಾವಾಗ ಕೂಗೋದು, ಅಷ್ಟೇ. ಮೀಟರ್ ಗೇಜ್, ನ್ಯಾರೋಗೇಜ್ ಟ್ರೈನುಗಳೂ ಅಷ್ಟೇ. ಎಷ್ಟೇ ಹೊತ್ತಾದರೂ ಓಡಿಹೋಗಿ ಹತ್ಕೋಬಹುದಿತ್ತು. ಊರು ಬಿಟ್ಟ ತಕ್ಷಣ ಒಂದು ಸಿಗ್ನಲ್. ಊರು ತಲುಪೋಕ್ಕೆ ಮುಂಚೆ ಒಂದು ಸಿಗ್ನಲ್. ಈ ಎರಡೂ ಸಿಗ್ನಲ್‌ಗಳಲ್ಲೂ ಟ್ರೈನ್ ಯಾವಾಗಲೂ ಸ್ತಗಿತ - ಈ ಸಮಯದಲ್ಲಿ ಎಷ್ಟೋಜನ ಕೆಳಗಿಳಿದು ತಮ್ಮ ಕರ್ಮವಿಧಿಗಳನ್ನು ಮುಗಿಸಿಕೊಂಡು ಬರೋರು. ಮಿಕ್ಕವರೆಲ್ಲಾ ಕಡಲೇಕಾಯಿ, ಪಾಕಂಪೊಪ್ಪು, ಹಸಿಕಡಲೆಗೆ ಶರಣಾಗುತ್ತಿದ್ದರು.

ಇಂತಹಾ ಶಾಂತ ಚಿತ್ತ ಜೀವನದಲ್ಲಿ ಯಾರಿಗೂ ರಕ್ತದ ಒತ್ತಡ, ಸಕ್ಕರೆ ಬಾಧೆ ಅನ್ನೋ

ಖಾಯಿಲೆಗಳೇ ಇರಲಿಲ್ಲ! ಆವಾಗ ಇದ್ದ ಖಾಯಿಲೆಗಳು ಎಂದರೆ: ವಾಂತಿ-ಭೇದಿ, ಕಣ್ಣಾಕುಟಿಕೆ, ನೆಗಡಿ ಕೆಮ್ಮು ಅಷ್ಟೆ ಇವಕ್ಕೆ ಔಷಧಿಗಳೇ ಇರಲಿಲ್ಲ. ಹಾಗಾಗಿ ಅವುಗಳು ಬರುತ್ತಿದ್ದವು : ಹೋಗುತ್ತಿದ್ದವು. ರೋಗಿಗಳಿಗೂ ಅವಸರವಿಲ್ಲ, ಡಾಕ್ಟರಿಗೂ ಅವಸರವಿಲ್ಲ. ಏನಾದರೂ ಹೆಚ್ಚುಕಮ್ಮಿ ಆದರೆ "ಆಗಿದ್ದೆಲ್ಲಾ ಒಳಿತೇ ಆಯಿತು" ಅಂತ ಸಮಾಧಾನ ಪಟ್ಟುಕೊಳ್ಳೋದು! ಏನೇ ಹೇಳಿ, ರಸ್ತೆಗಳಲ್ಲಿ ಈಗಿನಷ್ಟು ಬೀದಿ ನಾಯಿಗಳಂತೂ ಇರ್‍ತಿರಲಿಲ್ಲ. ಒಂದೋ ಎರಡೋ ಇರೋವು. ಆದರೆ ಅವೆಲ್ಲಾ ನಿಯಮಬದ್ಧವಾಗಿ "ಕಚ್ಚೋ ನಾಯಿ ಬೊಗಳೋಲ್ಲ, ಬೊಗಳೋ ನಾಯಿ ಕಚ್ಚಲ್ಲ" ನಾಣ್ಣುಡಿಯನ್ನು ಪಾಲಿಸುತ್ತಿದ್ದವು. ಈಗಿನ ಕಾಲದಲ್ಲಿ ನಾಯಿಗಳು ಬೊಗಳಿಕೊಂಡು ಬಂದು ಕಚ್ಚುತ್ತವೆ! ನನಗೆ ಜ್ಞಾಪಕ ಇರೋ ಹಾಗೆ ನನಗೆ ಕಚ್ಚಿದ ನಾಯಿ ಒಂದು ದಿನ ಬೊಗಳಿದ್ದನ್ನು ಕೇಳಿಲ್ಲ.

ಲಂಗಾದಾವಣಿ ಯುಗಾರಿ ಆಗ! ಹೆಣ್ಣುಮಕ್ಕಳು ರೋಡಿನಲ್ಲಿ ಹೋಗ್ತಿದ್ರೆ ನೋಡೋಕ್ಕೆ ಖುಷಿಯಾಗೋದು. ನಾವು ಸಲ್ವಾರ್ ಕಮ್ಮೀಜ್ ನೋಡ್ತಿದಿದ್ದು 'ಜಾನ್ಸಿ ಕಿ ರಾಣಿ' ಅಂತಹ ಹಿಂದಿ ಸಿನಿಮಾದಲ್ಲಷ್ಟೆ. ಈಗ ದಾರೀಲಿ ಹೋಗ್ತಿರೋರು ಹೆಣ್ಣುಮಕ್ಕಳೋ ಇಲ್ಲಾ ಗಂಡು ಹುಡುಗರೋ ಅಂತ ತಿಳಿದುಕೊಳ್ಳೋದೇ ಕಷ್ಟ

'ಸಂತೃಪ್ತಿ' ಅನ್ನೋದು ನಮ್ಮ ಜೀವನದ ಒಳಗುಟ್ಟಾಗಿತ್ತು ರೀ. ವಾರಕ್ಕೆ ಮೂರುದಿನ ನಲ್ಲೀಲಿ ಬೆಳಗಿನ ಜಾವ ಮೂರುಗಂಟೆಗೆ ಸ್ವಲ್ಪ ಹೊತ್ತು ನೀರು ಸಿಗೋದು ಅಷ್ಟೆ ಈ 'ನೀರ್' ಬಿಟ್ರೆ, ಹಣ ಇರೋರು ಎಂ.ಜಿ. ರೋಡಿನಲ್ಲಿ 'ಬೀರ್' ಕುಡಿಯೋರು ಅಷ್ಟೆ. ಮನೇನಲ್ಲಿ ಫ್ಯಾನ್‌ಗಳೂ ಇರ್ಲಿಲ್ಲ, ವಿದ್ಯುತ್ ಸ್ಟೌವ್‌ಗಳಂತೂ ಕೇಳಲೇ ಬೇಡಿ. ಇನ್ನು ವಿದ್ಯುಚ್ಛಕ್ತಿ ಯಾಕೆ? ಟೀವೀನೂ ಇರಲಿಲ್ಲ, ರಾತ್ರಿ ಒಂಭತ್ತು ಘಂಟೆಗೆ ಮನೆಯ ಹಿರಿಯರು ಇಂಗ್ಲಿಷ್ ನ್ಯೂಸ್ ಕೇಳಿದ ತಕ್ಷಣ ಊರಿಗೆ ಊರೇ ಗುಡ್‌ನೈಟ್! ಅಂತ ಮಲಗೋದು, ಬೆಳಗ್ಗೆ ಏಳುತ್ತಿದ್ದುದ್ದು ಫಿಲ್ಟರ್ ಕಾಫಿ ವಾಸನೇಗೇ!

ಆವಾಗೆಲ್ಲಾ ಎಮ್ಮೆ ಹಾಲು, ಹಸು ಹಾಲು ನಿಜವಾಗ್ಲೂ ಎಮ್ಮೆ ಮತ್ತು ಹಸುವಿನಿಂದಲೇ ಬರುತ್ತೆ ಅನ್ನೋದಕ್ಕೆ ಸಂದೇಹವೇ ಇರ್‍ತಿರಲಿಲ್ಲ. ಯಾಕೆ ಅಂದರೆ ಹಾಲಿನವರು ಎಮ್ಮೆ ಮತ್ತು ಹಸುವುಗಳನ್ನು ಮನೆ ಮುಂದೇನೇ ಕಟ್ಟಿ ನಮ್ಮ ಕಣ್ಣು ಮುಂದೇನೇ ಹಾಲು ಕರೆಯೋರು. ಈಗ ಕೆಲವರಿಗೆ ಹಾಲು ಫ್ಯಾಕ್ಟರೀಲಿ ತಯಾರಾಗುತ್ತೆ (ಕೋಕೋ, ಪೆಪ್ಸಿ ತರಹ) ಅಂತ ಭಾವನೆ. ಆವಾಗೆಲ್ಲಾ ನಮ್ಮ ಕಣ್ಣೆದುರಿಗೆ ಹಾಲಿಗೆ ಸ್ವಲ್ಪ ನೀರು ಬೆರಸೋರು. ಈಗ ನಮ್ಮ ಕಣ್ಣು ತಪ್ಪಿಸಿ ನೀರಿಗೆ ಹಾಲನ್ನು ಬೆರೆಸುತ್ತಾರೆ. ಈಗಲೂ ಏನಾದರೂ ತರಲೆ ಮಾಡಿದರೆ ಮಕ್ಕಳು ಅಪ್ಪ ಅಮ್ಮಂದಿರ ಹತ್ತಿರ "ಕತ್ತೆ, ಕತ್ತೆ!" ಅಂತ ಬೈಯಿಸಿಕೊಳ್ಳೋದು ಉಂಟು. ಆದರೆ ಈಗಿನ ಕಾಲದ ಮಕ್ಕಳು ನಿಜವಾದ ಜೀವಂತ ಕತ್ತೆಗಳನ್ನು ಎಲ್ಲಾದರೂ ನೋಡಿದ್ದಾರೆಯೆ? ಆ ಕಾಲದಲ್ಲಿ ರೋಡಿಗೊಂದೆರಡು ಕತ್ತೆಗಳಿದ್ದವು (ನಾವಲ್ಲದೆ)!

ಆವಾಗ ಹೆಂಗಸರೂ ಗಂಡಸರೂ ಆರೋಗ್ಯವಾಗಿದ್ದರು ಕಣ್ರಿ, ಡೈನಿಂಗ್ ಟೇಬಲ್, ಗ್ಯಾಸ್ ಸಿಲಿಂಡರ್, ಕುಕ್ಕಿಂಗ್ ಪ್ಲಾಟ್‌ಫಾರ್ಮ್ ಇಲ್ಲದ ಕಾಲ; ಮನೆ ಹೆಂಗಸು ಎದ್ದು ಬಗ್ಗಿ ಕೂತು, ರುಬ್ಬಿ ಕುಟ್ಟಿ ಕೆಲಸ ಮಾಡ್ತಿದ್ದಳು. ಗಂಡ ಕಂಡ ಕಡೆ ಕ್ಯೂನಲ್ಲಿ ನಿಂತುಕೊಂಡು ಕೈಕಾಲು

ಗಟ್ಟಿಮಾಡಿಕೊಳ್ಳುತ್ತಿದ್ವಿ. ಹುಡುಗರು ಸೈಕಲ್ ತುಳಿಯೋರು. ಹೆಣ್ಣುಮಕ್ಕಳು ಕುಂಟೆಬಿಲ್ಲೆ ಆಡೋರು.

ಆವಾಗೆಲ್ಲಾ ದೇವರನ್ನು ಪ್ರಾರ್ಥಿಸೋಕ್ಕೆ ನೇರವಾಗಿ ದೇವಸ್ಥಾನಕ್ಕೆ ಹೋಗಬಹುದಿತ್ತು. ಈಗಿನ ಹಾಗೆ ಸ್ವಾಮೀಜಿಗಳು, ಗುರುಗಳು ಮಧ್ಯಸ್ಥರಾಗಿ ಇರಲಿಲ್ಲ. "ದೇವ್ರೇ ನಮ್ಮಪ್ಪಾ ಕಾಪಾಡಪ್ಪಾ!" ಅಂತ ಕೇಳ್ತಿದ್ವಿ. ಈಗ "ಸ್ವಾಮೀಜೀ... ಗುರೂಜೀ... ಆಜೀ... ಈಜೀ..." ಅಂತೀವಿ. ಜೊತೆಗೆ ಯೋಗಾ ಬೇರೆ ಮಾಡ್ತೀವಿ. ಯೋಗಾಭ್ಯಾಸಕ್ಕೂ ದೇವರಿಗೂ ಆಗಿನ ಕಾಲದಲ್ಲಿ ಯಾವ ಸಂಬಂಧವೂ ಇರಲಿಲ್ಲ.

ಗಂಡು ಹೆಣ್ಣನ್ನು ನೋಡೋಕ್ಕೆ ಬಂದಾಗ 'ಭಾಮೆಯ ನೋಡಲು ತಾ ಬಂದಾ..' ಹಾಡು ಹೇಳಿ ಹುಡುಗಿ ನಾಚಿಕೆಯಿಂದ ತಲೆ ತಗ್ಗಿಸಿದ ಮೇಲೆ, ಗಂಡು ಹ್ಞೂ! ಅಂತ ಒಪ್ಪಿಗೆ ಕೊಡ್ತಿದ್ದ ಕಾಲ ಅದು. ಈಗ ಇಂಟರ್‌ನೆಟ್‌ನಲ್ಲಿ ಒಬ್ಬರನ್ನೊಬ್ಬರು ನೋಡದೆ ಮಾಯಾಲೋಕದಲ್ಲೇ ವಿವಾಹ ಮಾಡಿಕೊಳ್ತಾರೆ. ಆಗೆಲ್ಲಾ ಪ್ರತ್ಯಕ್ಷವಾಗಿ ಕಣ್ಣೆದುರಿಗೇ ಮಕ್ಕಳು ಹುಟ್ಟೋದು; I mean ಮದುವೆ ಆದ ಮೇಲೆ (ಕಾರ್ಪೊರೇಶನ್ ಹೆರಿಗೆ ಆಸ್ಪತ್ರೆಗಳು ಇದ್ದವಲ್ಲ) ಈಗ, ಅಂದರೆ ಇನ್ನು ಮುಂದೆ ಮಕ್ಕಳೂ ಇಂಟರ್‌ನೆಟ್‌ನಲ್ಲೇ ಹುಟ್ಟೋಕೆ ಶುರುಮಾಡಿದ್ರೆ ಈ ಆಸ್ಪತ್ರೆಗಳ ಗತಿ ಏನೂ?

ನಾನು ಬರಲೆ? ನಮಸ್ಕಾರ.

✵

ನಮ್ಮ ದೇಶದಲ್ಲಿ

- ಪೋಲೀಸ್ ಅಂಬುಲೆನ್ಸ್‌ಗಿಂತ ಮೊದಲು ಪೀಜಾ ಮನೆ ಮುಟ್ಟುತ್ತದೆ.
- ಶಿಕ್ಷಣ ಸಾಲಕ್ಕೆ ಶೇ 12 ಬಡ್ಡಿ ಆದರೆ ಕಾರು ಕೊಳ್ಳಲು ಸಾಲ ಶೇ 8 ಬಡ್ಡಿ ದರದಲ್ಲಿ ಸಿಗುತ್ತದೆ.
- ಅಕ್ಕಿ ಕಿಲೋಗೆ 40 ರೂ. ಆದರೆ ಸಿಮ್ ಕಾರ್ಡ್ ಉಚಿತ.
- ಕಾಲಿಗೆ ಹಾಕುವ ಚಪ್ಪಲಿ ಎ.ಸಿ. ಅಂಗಡಿಯಲ್ಲಿ ಮಾರಾಟವಾದರೆ ತಿನ್ನುವ ತರಕಾರಿ ಫುಟ್‌ಪಾತ್ ಮೇಲೆ ಬಿಕರಿಯಾಗುತ್ತದೆ.
- ಕೃತಕ ವಸ್ತುಗಳನ್ನು ಬಳಸಿ ನಿಂಬೆ ಜ್ಯೂಸ್ ತಯಾರಿಸಿದರೆ ಡಿಶ್ ವಾಶರ್ ತಯಾರಿಸಲು ಅಸಲಿ ನಿಂಬೆ ಹಣ್ಣನ್ನೇ ಬಳಸುತ್ತಾರೆ.
- ಟೀ ಅಂಗಡಿ ಮುಂದೆ ಬಾಲ ಕಾರ್ಮಿಕರ ಬಗ್ಗೆ ಚರ್ಚಿಸುವವರು 'ಮಕ್ಕಳನ್ನು ದುಡಿಸುವವರರನ್ನು ಗಲ್ಲಿಗೆ ಹಾಕಬೇಕು' ಎಂದು ರೋಷದಿಂದ ಹೇಳಿ ಬಾಯಿ ಒಣಗಿದಾಗ "ಏ ಮರಿ ಎರಡು ಟೀ ತಾ. ಬೇಗ" ಎಂದು ಕೂಗು ಹಾಕುತ್ತಾರೆ.

– ಕುಬ್ಜ

ಹುರುಳಿ ಕಟ್ಟು...

ವಾಮನ ತ್ರಿವಿಕ್ರಮ......

- ಎಚ್. ಗೋಪಾಲಕೃಷ್ಣ

ನಾನು ಉದ್ಯೋಗಕ್ಕೆ ಸೇರಿದ ಹೊಸದರಲ್ಲಿ ಪರಿಚಿತರಾದ ಸುಮಾರು ಜನರು ನನಗೆ ಒಂದು ರೀತಿಯಲ್ಲಿ ಆಶ್ಚರ್ಯ ಮತ್ತು ಮನೋಲ್ಲಾಸ ಉಂಟು ಮಾಡಿದವರು ಇದ್ದಾರೆ. ಇವರುಗಳು ಯಾವಾಗಲೂ ನನ್ನ ನೆನಪಿನಲ್ಲಿ ಬರುತ್ತಲೇ ಇರುತ್ತಾರೆ. ಅಂತಹ ಒಂದು ಅಪರೂಪದ ವ್ಯಕ್ತಿಯ ವಿಷಯವನ್ನು ನಿಮಗೆ ಹೇಳಲೇಬೇಕು -

ಕರ್ನಾಟಕದ ಹಿಂದುಳಿದ ಜಿಲ್ಲೆಯಲ್ಲಿ ಒಂದಾದ ಕೋಲಾರದ ಸಮೀಪದ ಹಳ್ಳಿಯಿಂದ ಅತಿ ಹಿಂದುಳಿದ ಪಂಗಡದಿಂದ ಈ ಸ್ನೇಹಿತರು ಬಂದಿದ್ದರು. ಕಡು ಬಡತನದಿಂದ ಬಂದಿದ್ದರಿಂದಲೋ ಏನೋ ಒಂದು ರೀತಿಯ ವಿನೀತ ಭಾವ ಇವರ ಮುಖದಲ್ಲಿ ಯಾವಾಗಲೂ ಎದ್ದು ಕಾಣುತ್ತಿತ್ತು ಹಾಗೂ ಒಂದು ರೀತಿಯ ಸೌಮ್ಯ ಸ್ವಭಾವ ಅದೂ ಸಹಾ ತುಂಬಾ ಅಪರೂಪದ್ದು ಎಂದೇ ಹೇಳಬೇಕು. ಬರೀ ಎಸ್ಸೆಲ್ಸಿ ವರೆಗೆ ಓದು ಮತ್ತು ಮುಂದೆ ಓದಲು ಅನುಕೂಲಗಳು ಇಲ್ಲದೇ ನೇರವಾಗಿ ಉದ್ಯೋಗಕ್ಕೆ ಬಂದಿದ್ದರು ಈತ. ಕೆಳ ಹಂತದ ಉದ್ಯೋಗ ಮತ್ತು ಅದರಲ್ಲಿಯೇ ಒಂದು ರೀತಿಯ ತೃಪ್ತಿ ಕಂಡುಕೊಂಡಿದ್ದರು.

ಕೊಟ್ಟ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದರಿಂದ ಎಲ್ಲರಿಗೂ ಅಚ್ಚು ಮೆಚ್ಚು. ಬಡತನದಲ್ಲಿ ಬೆಳೆದು ಬಂದಿದ್ದರಿಂದ ಮುಂದೆ ಬರಲೇಬೇಕು ಅನ್ನುವ ಸಹಜವಾದ ಆಸೆ ಸಹಾ ಈತನಿಗೆ. ಅದರಿಂದ ಆತನಿಗೆ ತೋರಿದ ಸಣ್ಣ ಪುಟ್ಟ ಉದ್ಯೋಗವನ್ನು ಮಾಡುತ್ತಿದ್ದ- ಚಿಕ್ಕ ಪುಟ್ಟ ವ್ಯಾಪಾರದಿಂದ ಆತನಿಗೆ ಬರುವ ಕನಸುಗಳಿಗೆ ರೂಪು ಕೊಡುತ್ತಾ ಬಂದ. ಆತನ ವ್ಯಾಪಾರ ಹಂತ ಹಂತವಾಗಿ ಮೇಲೇರಿ ಕೊಂಚ ದೊಡ್ಡ ವ್ಯಾಪಾರಕ್ಕೂ ಕೈ ಹಾಕಿದ. ದೊಡ್ಡ ವ್ಯಾಪಾರ ಅಂದರೆ ಸೈಟಿನ ವ್ಯಾಪಾರ. ಈ ವ್ಯಾಪಾರ ಶುರುವಾದ ನಂತರ ಈತ ಬೆಳೆದದ್ದೇ ಒಂದು ದೊಡ್ಡ ಕಥೆ. ಹಣ ಹೆಚ್ಚೆಚ್ಚು ಬಂದಹಾಗೂ ಈತನ ಸಾಮಾಜಿಕ ಕಳಕಳಿ ಹೆಚ್ಚುತ್ತಾ ಹೋಯಿತು. ಬಡ ಮಕ್ಕಳಿಗೆ ಶಾಲೆಗೆ ಸೇರಲು, ಶಾಲೆ ಸೇರಿದ ನಂತರ ನಿರಾತಂಕವಾಗಿ ಓದು ಮುಂದುವರಿಸಲು ಅದೇನೇನು ಅನುಕೂಲಗಳು ಬೇಕೋ-ಪುಸ್ತಕ ನೀಡುವುದು, ಶಾಲಾ ಕಾಲೇಜುಗಳಲ್ಲಿ ಓದುವ ಬಡ ಮಕ್ಕಳ ಶುಲ್ಕದ ಬಗ್ಗೆ ಪಾವತಿ ಕ್ರಮ ತೆಗೆದುಕೊಳ್ಳುವುದು, ಮನೆ ಹತ್ತಿರ ಬಡ ಮಕ್ಕಳಿಗೆ ಅನುಕೂಲವಾಗುವ ಹಾಗೆ ಪಾಠ-ಪ್ರವಚನ ಏರ್ಪಾಡು ಮಾಡುವುದು- ಮಕ್ಕಳ ಓದಿಗೆ ಅವರುಗಳ ಆರ್ಥಿಕ ಸಮಸ್ಯೆಗಳು ಅಡ್ಡಿ ಬರಬಾರದು ಅನ್ನುವ ಯೋಚನೆಯಲ್ಲಿ ಮುಂದೆ ಸಾಗಿ ಹಲವಾರು ಹೊಸ ವಿವಿಧ ಯೋಜನೆಗಳನ್ನು ಹಮ್ಮಿಕೊಂಡ ಮತ್ತು ಅವುಗಳನ್ನು ಯಶಸ್ವಿಯಾಗಿಯೂ ನಿರ್ವಹಿಸಿದ. ಒಂದು ವಿಧದಲ್ಲಿ ಮೌನ ಕ್ರಾಂತಿ ಅನ್ನುತ್ತಾರಲ್ಲಾ ಅದನ್ನು ಸಾಧಿಸಿಬಿಟ್ಟ. ನನಗೆ ನೆನಪಿರುವ ಹಾಗೆಯೇ ಒಂದು ಪುಟ್ಟ ಸಂಗತಿ ನಿಮಗೆ ಹೇಳಬೇಕು- ನಮಗೆ ಗೊತ್ತಿರುವ ಒಂದು ಶಾಲೆಯಲ್ಲಿ ಮಧ್ಯಾಹ್ನದ ಊಟದ

ಯೋಜನೆ ಶುರುವಾಯಿತು. ಬಡವರ ಶಾಲೆ ಅದು. ಸಂಬಂಧ ಪಟ್ಟವರ ಬಳಿ ಮಾತನಾಡಿ ಅಲ್ಲಿಯ ಶಾಲಾ ಮಕ್ಕಳಿಗೆ ಈ ಸೌಲಭ್ಯವನ್ನು ಕೆಲವರು ಒದಗಿಸುವುದರಲ್ಲಿ ಯಶಸ್ವಿಯಾಗಿದ್ದರು. ಮಾರನೇ ದಿವಸದಿಂದ ಶಾಲೆಗೆ ಊಟ ಬರುತ್ತೆ- ಆದರೆ ಅದನ್ನು ಹಂಚಲು ತಟ್ಟೆ ಪಾತ್ರೆ ಸೌಟುಗಳೇ ಇಲ್ಲ! ಇದರ ಬಗ್ಗೆ ಯಾರೂ ಯೋಚನೆಯನ್ನೇ ಮಾಡಿರಲಿಲ್ಲ. ಮಧ್ಯ ರಾತ್ರಿ ಹೊತ್ತಿನಲ್ಲಿ ಏನು ಮಾಡಬೇಕು ಎಂದು ತಿಳಿಯದೇ ಇವರೆಲ್ಲರೂ ಪರದಾಡುತ್ತಿರಬೇಕಾದರೆ ನಮ್ಮ ಕೋಲಾರದ ಯುವಕನ ಪ್ರವೇಶವಾಯಿತು. ಸಮಸ್ಯೆ ತಿಳಿದುಕೊಂಡವನೇ ಎಷ್ಟು ಹೊತ್ತಿಗೆ ಪಾತ್ರೆ ಪರಿಕರ ಬೇಕು ಅಂತ ತಿಳಿದುಕೊಂಡ. ಯೋಚಿಸಬೇಡಿ ಏನಾದರೂ ವ್ಯವಸ್ಥೆ ಮಾಡೋಣಾ ಅಂತ ಹೊರಟ. ಬೆಳಗಿನ ಎಂಟು ಗಂಟೆ ಹೊತ್ತಿಗೆ ಶಾಲೆ ಮುಂದೆ ಒಂದು ಲಾರಿ ಬಂದು ನಿಂತಿತು- ಅದರಿಂದ ಶಾಲಾ ಮಧ್ಯಾಹ್ನದ ಊಟಕ್ಕೆ ಬೇಕಾದ ಸಕಲ ಪರಿಕರವೂ ಇಣುಕುತ್ತಿದೆ! ಇದೆಲ್ಲಾ ಸಿಗೋ ಅಂಗಡಿ ಯಜಮಾನರ ಹತ್ತಿರ ಹೋದೆ-ಮಕ್ಕಳಿಗೆ ಹೀಗೆ ವ್ಯವಸ್ಥೆ ಮಾಡಿಕೊಂಡಿದೀವಿ-ಎಲ್ಲಾ ಅಂಗಡಿಗಳೂ ಬಾಗಿಲು ಹಾಕಿವೆ ಈಗಲೇ ನನಗೆ ಈ ಸಾಮಾನುಗಳು ಬೇಕು ಅಂತ ಅವರನ್ನ ಎಬ್ಬಿಸಿ ಅಂಗಡಿಗೆ ಕರೆದುಕೊಂಡು ಬಂದೆ. ಬೆಳಗಿನ ಜಾವದವರೆಗೆ ಲಾರೀಗೆ ತುಂಬಿದರು- ಎಲ್ಲಾ ಸರಿ ಇದೆಯಾ ನೋಡಿಕೊಳ್ಳಿ.....

ದುಡ್ಡು ಎಷ್ಟು ಕೊಟ್ಟೀರಿ?

ಅಯ್ಯೋ ಅದೆಲ್ಲಾ ಬಿಡಿ ಸಾರ್, ನಮ್ಮ ಮಕ್ಕಳು ಅಲ್ಲವಾ?

ಇದು ಒಂದು ಸ್ಯಾಂಪಲ್ಲು. ಈ ರೀತಿಯ ಹಲವಾರು ಪ್ರಸಂಗಗಳನ್ನು ಈತನಿಗೆ ಪರಿಚಯವಿರುವವರು ಹೇಳುವುದುಂಟು. ಬಡಾವಣೆಗಳನ್ನು ನಿರ್ಮಿಸಿ ಸುಮಾರು ಜನರಿಗೆ ಸೈಟುಗಳನ್ನು ಈತ ನೀಡಿದ್ದು ನನಗೆ ಗೊತ್ತು- ಅದಕ್ಕಿಂತಲೂ ತಮಾಷೆ ಎಂದರೆ ಸುಮಾರು ಜನ ಪೂರ್ತಿ ಹಣವನ್ನೇ ನೀಡದೇ ಈತನಿಂದ ಸೈಟುಗಳನ್ನು ಪಡೆದರು. ಸುಮಾರು ಜನರಿಗೆ ಈತನೇ ತುಂಬಾ ಕಡಿಮೆ ದರದಲ್ಲಿ ಮನೆಗಳನ್ನೂ ಕಟ್ಟಿಸಿಕೊಟ್ಟ-ಅದೂ ಸುಲಭ ಕಂತಿನಲ್ಲಿ! ಮನೆ ಹತ್ತಿರದ ಸರ್ಕಾರಿ ಶಾಲೆಯ ಕಟ್ಟಡ ಬಿದ್ದು ಹೋಗುವ ಹಾಗಿದ್ದಾಗ ಈತ ಲಕ್ಷ ಲಕ್ಷಗಳನ್ನು ಖರ್ಚು ಮಾಡಿ ಅದನ್ನು ಕಟ್ಟಿಸಿದ, ಹಲವಾರು ಮಕ್ಕಳ ಶಾಲಾ ಖರ್ಚು ವೆಚ್ಚಗಳನ್ನು ಭರಿಸಿದ. ಎಡಗೈಗೆ ಬಲಗೈ ಮಾಡಿದ್ದು ತಿಳಿಯದ ಹಾಗೆ ಈತನ ವರ್ತನೆ.

ನೀರಿಗೆ ಹಾಹಾಕಾರವೆದ್ದಾಗ ಈತ ಉಚಿತ ನೀರು ಸರಬರಾಜು ಅಂತ ಒಂದು ಮಿನಿಲಾರಿಯಲ್ಲಿ ಇಡೀ ಬಡಾವಣೆಯಲ್ಲಿ ನೀರು ಹಂಚಿದ್ದೂ ಉಂಟು.

ಈ ಸಂಗತಿಗಳನ್ನು ಯಾರ ಬಳಿಯಲ್ಲಿಯೂ ಬಾಯಿಬಿಟ್ಟವನೇ ಅಲ್ಲ!

ತುಂಬಾ ಹತ್ತಿರದಿಂದ ನೋಡುತ್ತಿದ್ದ ನನ್ನ ತರಹದ ಕೆಲವೇ ಕೆಲವರಿಗೆ ಮಾತ್ರಾ ಈತನ ಈ ಮುಖದ ಪರಿಚಯ. ಇವೆಲ್ಲವನ್ನೂ ಈತ ಮಾಡಿದ್ದು ಇನ್ನೂ ಉದ್ಯೋಗದಲ್ಲಿ ಇದ್ದಾಗಲೇ. ಎಲೆಕ್ಷನ್ ಸ್ಟಂಟ್ ಎಂದು ಹೇಳುವ ಹಾಗೆ ಹತ್ತಿರದಲ್ಲಿ ಯಾವುದೇ ಚುನಾವಣೆಯೂ ಇರಲಿಲ್ಲ. ಆದರೆ ನಾಯಕತ್ವದ ಗುಣ ಮೊಳಕೆಯಲ್ಲಿಯೇ ಕಾಣಿಸುತ್ತೆ ಅನ್ನುತ್ತಾರೆ ನೋಡಿ

ಹಾಗೇ ಆಗಿದ್ದು. ಎರಡು ವರ್ಷದ ಹಿಂದೆ ಈತನಿಗೆ ಕೆಲಸದಿಂದ ನಿವೃತ್ತಿಯಾಯಿತು. ಆದರೆ ಸಮಾಜ ಸೇವೆ ಹಾಗೇ ಮುಂದುವರೆದುಕೊಂಡು ಬಂತು. ಮೊನ್ನೆ ಚುನಾವಣೆಯಲ್ಲಿ ಈತ ಜಯಭೇರಿ ಬಾರಿಸಿದ. ಅದಕ್ಕೆ ಮೊದಲು ಒಂದು ಇಂಜಿನಿಯರಿಂಗ್ ಕಾಲೇಜನ್ನೂ ಶುರು ಮಾಡುವ ಯೋಜನೆ ಹಮ್ಮಿಕೊಂಡಿದ್ದ. ಆದರೂ ಅದೇ ವಿನಯ, ಅದೇ ಸಭ್ಯತೆ ಅದೇ ನಮ್ರತೆ.....

ಬೇಕೆಂದೇ ಈ ನನ್ನ ಗೆಳೆಯನ ಹೆಸರನ್ನು ನಾನೆಲ್ಲೂ ಹೇಳಿಲ್ಲ. ಆತನಿಗೆ ಮುಜುಗರ ಮಾಡಬಾರದು ಎನ್ನುವುದು ಒಂದು ಉದ್ದೇಶವಾದರೆ ಮತ್ತೊಂದು ಈತನ ಈ ರೀತಿಯ ಜನೋಪಯೋಗಿ ಕಾರ್ಯಗಳು ಹೀಗೇ ಇನ್ನೂ ಹೆಚ್ಚೆಚ್ಚು ಮುಂದುವರಿಯಲಿ ಎನ್ನುವುದು. ಅಲ್ಲಿಯವರೆಗೆ ಪ್ರಚಾರ ನೀಡುವುದು ಬೇಡ ಅಂತ ನಾನು ಹೆಸರನ್ನು ನಿಗೂಢವಾಗಿಯೇ ಇರಿಸಿದ್ದೇನೆ. ಇದು ನೈಜ ಪ್ರಸಂಗ. ಯಾರಾದರೂ ಯಾರಿಗಾದರೂ ಯಾರನ್ನಾದರೂ ತೋರಿಸಿ ನೀನು ಇವರ ರೀತಿ ಬೆಳೆಯಬೇಕು ಎಂದು ಹೇಳುವ ಹಾಗಿದ್ದರೆ ಈತ ನಿಜಕ್ಕೂ ಒಂದು ರೋಲ್ ಮಾಡಲ್ !

> ಸೀತಾಯಣ
> ಹೋಗೋ ಮುಂದೆ
> ಲಕ್ಷ್ಮಣ ಗೆರಿ ಹೊಡೆದ
> ಆ ಮೇಲೆ ಬಂದ
> ರಾವಣ ಲೈನು ಹೊಡೆದ
> **– ಚಂಪಾ ಅವರ ಲೇಖನದಿಂದ**

ತಮಾಷೆಗಾಗಿ ನಾನು ಈತನನ್ನು ವಾಮನ ಎಂದು ಕರೆಯುವುದುಂಟು. ವಾಮನ ತ್ರಿವಿಕ್ರಮನಾಗಿ ಬೆಳೆದ ಕಥೆ ಈತನದ್ದು !

✲



Mailing Date
5th of every month
Mailed at: MBC Bangalore GPO

CPMG/KA/BGW-544/2009-2011
RNI-KAR-KAN / 2005/ 15457

Printed by: V.R. NATH for the Publisher KORAVANJI APARANJI TRUST. Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS. 58/2. 2nd Main Road, Industrial Town, Rajajinagar, Bangalore - 560 010. PH : 4088 9999.
Editor: M. SHIVAKUMAR